ಸೆಳೆಯುವ ಉದ್ದೇಶದಿಂದ ಇವತ್ತು ಮಾನ್ಯ ಸದಸ್ಯರು ಈ ರೀತಿ ಮಾಡಿದ್ದಾರೆ. ಕಳೆದ 8 ತಿಂಗಳಿನಿಂದ ಸುರಕ್ಷಿತ ಕರ್ನಾಟಕದ ನಿರ್ಮಾಣವೇ ನಮ್ಮ ಆದ್ಯತೆ. ಇದು ಬಿಜೆಪಿಯ ಗುರಿ, ಬಿಜೆಪಿಯೇ ಪರಿಹಾರ. ಇದನ್ನು ಹೇಳಿದವರು ಈ ಸದನದಿಂದ ಮೂಡಿ ಬಂದಂಥ ಸರ್ಕಾರ. ಸರ್ಕಾರದ ಘೋಷಣೆ ಅದು. ಆ ಘೋಷಣೆಯಲ್ಲಿ ನಾನು ಒಂದು ಮುಖ್ಯವಾಗಿರುವ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಹೊರಟಿರುವುದು ಎಂದು ಹೇಳಿದರೆ ಈ ಮನೆಯ ಅಧೀನದಲ್ಲಿರುವ ಸರ್ಕಾರ. ಇವತ್ತು ಯಾವುದೋ ಒಂದು ರೀತಿಯಲ್ಲಿ ಕರ್ತವ್ಯ ಲೋಪವಾಗಿರುವ ಸಂದರ್ಭದಲ್ಲಿ ಅಲ್ಲಿನ ನಡೆವಳಿಕೆಯಲ್ಲಿ ಆಗಿರುವಂಥ defaults ಅನ್ನು omissions and commissions ಆದಂಥ ಸಂದರ್ಭದಲ್ಲಿ ನಿಲುವಳಿ ಸೂಚನೆ ಮೂಲಕ ಇವತ್ತು ನಾವು ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ. ಚುನಾವಣೆಯಲ್ಲಿ ನಾವೆಲ್ಲರೂ ಕೂಡ contest ಮಾಡುತ್ತೇವೆ, ಗೆಲ್ಲುತ್ತೇವೆ. ಗೆದ್ದ ತಕ್ಷಣವೇ ತಹಸೀಲ್ದಾರ್ ಅಥವಾ Returning Officer ಕೊಡತಕ್ಕಂಥ ಸರ್ಟಿಫಿಕೇಟ್ ಅಂತಿಮವಾಗುವುದಿಲ್ಲ.

ಅಧ್ಯಕ್ಷರು :- ಜಯಚಂದ್ರರವರೇ ಈ ಎಲ್ಲ ವಿಷಯವನ್ನು ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಹೇಳಬಹುದಲ್ಲವೇ.

ಶ್ರೀ ಟಿ.ಬಿ. ಜಯಚಂದ್ರ :- ನಾನು ತಮ್ಮ ಮನಸ್ಸನ್ನು ಒಲಿಸಿ ಕೊಳ್ಳುವುದಕ್ಕೋಸ್ಕರ ಮಾತನಾಡುತ್ತಿದ್ದೇನೆ.

2. <u>ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ</u>

ವಿಷಯ :- ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವೈಫಲ್ಯತೆ ಬಗ್ಗೆ.

ಅಧ್ಯಕ್ಷರು :- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇವೆಲ್ಲವನ್ನು detail ಆಗಿ ಚರ್ಚೆ ಮಾಡಬಹುದು. ನೀವು ಈಗ ಪ್ರಾರಂಭ ಮಾಡಿದ್ದೀರಿ. ಅದನ್ನೇ ಮುಂದೆ continue ಮಾಡಬಹುದು.

ಶ್ರೀ ಟಿ.ಬಿ. ಜಯಚಂದ್ರ :- ಅಧ್ಯಕ್ಷರೇ, ಏನಾಗಿದೆಯೆಂದರೆ, ನಿಲುವಳಿ ಸೂಚನೆ ಏಕೆ ಬಹಳ ಮುಖ್ಯವೆಂದರೆ, ಕಳೆದ 8 ತಿಂಗಳುಗಳಲ್ಲಿ ಈ ರಾಜ್ಯದಲ್ಲಿರುವ ಸರ್ಕಾರ ಯಾವ ರೀತಿಯಾಗಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಳಿ ತಪ್ಪಿದೆ, ಅದನ್ನು ಮತ್ತೆ ಹಳಿಗೆ ತರಬೇಕಾದರೆ ನಾವು ಏನು ಮಾಡಬೇಕಾಗುತ್ತದೆ? ಅಧ್ಯಕ್ಷರೇ ಒಂದು ಮುಖ್ಯವಾದಂಥ ವಿಚಾರ. ಇವತ್ತು ನಾವೆಲ್ಲಾ ಶಾಸಕರಾಗಿ ಈ

ಮನೆಯೊಳಗೆ ಪ್ರವೇಶ ಮಾಡುವ ಸಂದರ್ಭದಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಬೇಕಾಗುತ್ತದೆ. ನಿನ್ನೆಯಷ್ಟೇ ಸದಸ್ಯರು ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಪ್ರಮಾಣ ವಚನ ಸ್ವೀಕಾರ ಮಾಡುವ ಸಂದರ್ಭದಲ್ಲಿ ಅವರಿಗೆ ಏನು ಬೋಧನೆ ಆಗುತ್ತದೆ, ನಾವು ಏನು ಪ್ರಮಾಣವನ್ನು ಮಾಡುತ್ತೇವೆಂದು ಹೇಳಿದಾಗ ನಮ್ಮ ಪ್ರಮಾಣದ ಗುರಿ ಏನೆಂದರೆ ನಮ್ಮ ಸಂವಿಧಾನಕ್ಕೆ ಅಧೀನರಾಗಿ ನಾವು ಕೆಲಸವನ್ನು ಮಾಡುತ್ತೇವೆ. ಸಂವಿಧಾನದಲ್ಲಿರತಕ್ಕಂಥದನ್ನು we will always uphold the sovereignty and the integrity of India. ಅದು ಬಹಳ ಮುಖ್ಯ. ಸಂವಿಧಾನವನ್ನು ಯಾವುದೇ ರೀತಿಯಲ್ಲಿಯೂ ಕೂಡ I will faithfully, consciously discharge my duties as Cabinet Minister. ಮುಖ್ಯವಾಗಿ ಇರತಕ್ಕಂಥದ್ದನ್ನು ಏನೆಂದು ಹೇಳಿದರೆ ಇವತ್ತು ಸಂವಿಧಾನದ fundamental rightsನಲ್ಲಿ ಅಡಕವಾಗಿರುವ ಹಾಗು ನಮ್ಮ ಸಂವಿಧಾನದ Preamble ನಲ್ಲಿರುವ ಪದ secularism ಎನ್ನುವುದು. ಅದನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ, ಅದನ್ನು ಪಾಲನೆ ಮಾಡುವುದಕ್ಕೋಸ್ಕರ ಇವತ್ತು ಪ್ರಮಾಣ ವಚನ ಸ್ವೀಕಾರ ಮಾಡಿ ನಾವೆಲ್ಲಾ ಸಭೆಯ ಒಳಗೆ ಬರುತ್ತೇವೆ. ಇವತ್ತು ಈ ದೇಶಕ್ಕೆ, ಈ ರಾಜ್ಯಕ್ಕೆ ಯಾವುದೇ ತೆರವಾದಂಥ official religion ಇಲ್ಲ. Secularism always provides full opportunity for all the persons to profess, practice and to propagate the religion of their choice . ಇದು ಸಂವಿಧಾನ. ಸಂವಿಧಾನದ ಅಡಿಯಲ್ಲಿ ಇವತ್ತು ಕಳೆದ 8 ತಿಂಗಳಲ್ಲಿ ರೈತರಿಗೆ ಏನಾಗಿದೆ? ಶಾಸಕರಿಗೆ ಏನಾಗಿದೆ? ಇವತ್ತು ಒಳ್ಳೆಯ ಗಾಂಧೀವಾದಿಗಳು ಎನ್ನಿಸಿಕೊಂಡಿದ್ದ ಮಾದೇಗೌಡರು ಇರಬಹುದು. ಅವರ ವಿಚಾರದಲ್ಲಿ ಏನಾಯಿತು. ಅದಕ್ಕೆ ಎಲ್ಲೋ ಒಂದು ಕಡೆ ಯಾವುದೋ ಒಂದು ರೀತಿಯಲ್ಲಿ ಸರ್ಕಾರ law and order maintain ಮಾಡಲಿಕ್ಕೆ ವಿಫಲವಾಗಿದೆಯೆಂಬುದಕ್ಕೆ ಇದು ಪೂರಕವಾಗಿರುವ ವಿಚಾರ. ನಾವು ಮುಖ್ಯವಾಗಿ ಈ ಸರ್ಕಾರದಿಂದ ಬಹಳಷ್ಟು ನಿರೀಕ್ಷೆ ಮಾಡಿದ್ದೇವೆ. ನಮಗೆಲ್ಲರಿಗೂ ರಕ್ಷಣೆ ಸಿಗುತ್ತದೆ ಎಂದರೆ, ಯಾವರೀತಿಯಾದ ರಕ್ಷಣೆ ಸಿಕ್ಕಿದೆ? ಮೊದಲನೇ ದಿವಸವೇ ಪ್ರಾರಂಭದ ದಿನಗಳಲ್ಲಿ ರೈತನ ಮೇಲೆ ಗುಂಡೇಟು ಹಾಕುವ ಕೆಲಸ ಆಯಿತು. ಒಂದು ಉದಾಹರಣೆ ಎಂದರೆ ಅಲ್ಲಿ ಗುಂಡೇಟು ಹಾಕುವ ಸಂದರ್ಭದಲ್ಲಿ ಅಲ್ಲಿ ಒಂದು

magisterial enquiry ಆಗುತ್ತದೆ. ಆ magisterial enquiryನಲ್ಲಿ ಪೊಲೀಸ್ ಆಫೀಸರ್ಸ್ ಅಲ್ಲಿ ಸತ್ತಿರುವವನು ರೈತನಲ್ಲ, ಗೂಂಡಾ ಎಂದು ವ್ಯಾಖ್ಯಾನ ಮಾಡಿದರೆ ಯಾವರೀತಿ ರಕ್ಷಣೆ ಸಿಗುತ್ತದೆ. ಯಾರು ಆತನನ್ನು ಗುಂಡು ಹಾಕಿ ಸಾಯಿಸಿದರೋ ಅವರೇ ಅವನು ಒಬ್ಬ ಗೂಂಡಾ, ರೈತನಲ್ಲವೆಂದು ಹೇಳಿಕೆ ಕೊಡುವ ಮಟ್ಟಕ್ಕೆ ಹೋಗುವುದಾದರೆ ಯಾವ ರೀತಿಯಾಗಿ ಕಾನೂನು ಸುವ್ಯವಸ್ಥೆಯ ರಕ್ಷಣೆ ಆಗುತ್ತಿದೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಬಹಳ ಮುಖ್ಯವಾಗಿ ಇವತ್ತು ನಮ್ಮಲ್ಲಿ ಎಲ್ಲಾ ವರ್ಗದ ಜನ, ಅಲ್ಪಸಂಖ್ಯಾತರು ಇದ್ದಾರೆ. ಅವರಲ್ಲಿ ಮುಸ್ಲಿಂ, ಜೈನರು ಅಥವ ಕ್ರಿಶ್ಚಿಯನ್ಸ್ ಇವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ಸಂವಿಧಾನದಲ್ಲಿ protection ಇದೆ. ಅವರಿಗೆ ರಕ್ಷಣೆ ಬೇಕು. ಸರ್ಕಾರದಿಂದ ಅವರು ರಕ್ಷಣೆಯನ್ನು ನಿರೀಕ್ಷೆ ಮಾಡುತ್ತಾರೆ.

ಸರ್ಕಾರದಿಂದ ಅವರು ರಕ್ಷಣೆ ನಿರೀಕ್ಷೆ ಮಾಡುತ್ತಾರೆ. ಅದರಲ್ಲೂ ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಏನು ನಡೆಯುತ್ತಿದೆ? ಅಲ್ಲಿ ಏನಾದರೂ ಸರ್ಕಾರ ಇದೆಯೇ? ಎಲ್ಲೋ ಒಂದು ಕಡೆಗೆ ನಮಗೆ ಏನು ಒಂದು ಭಾವನೆ ಬರುತ್ತದೆ ಎಂದರೆ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಪ್ಪಾಗಿ ಭಾವಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಎಲ್ಲೋ ಒಂದು ಕಡೆ remote control ಇದೆಯೇ ಎನ್ನುವ ಅನುಮಾನ ಬರುತ್ತದೆ. ಈ ಬಗ್ಗೆ ಪತ್ರಿಕೆಯಲ್ಲಿ ಬೇರೆ ಬೇರೆ ರೂಪದಲ್ಲಿ ವ್ಯಾಖ್ಯಾನ ಮಾಡಲಾಗುತ್ತಿದೆ. ಅದರ ಜೊತೆಗೆ ನೇರವಾಗಿ ಕೂಡ ಹೇಳುತ್ತಾರೆ, xxx xxx xxx ಎನ್ನುವ ಮಾತು ಇವತ್ತು ಎಲ್ಲಾ ಮಾಧ್ಯಮಗಳಲ್ಲಿ ಬರುತ್ತಿರುವುದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೇ, ನಿನ್ನೆ ನಾನು ನಿಮಗೆ ಒಂದು ಮಾತು ಹೇಳಿದ್ದೆ, ಮಾತನಾಡುವಾಗ ಯಾವುದೇ ಒಂದು ವ್ಯಕ್ತಿ, ಸಂಸ್ಥೆ ಬಗ್ಗೆ ಮಾತನಾಡುವುದಾದರೆ, ಪ್ರತ್ಯೇಕ ಸೂಚನೆ ಕೊಡಿ. ಯಾವುದೋ ಒಂದು ಸಂಸ್ಥೆಯ ಬಗ್ಗೆ ನೀವು ಮಾತನಾಡಿದರೆ, ಅದು ಪುನ: ಸಮಸ್ಯೆಯಾಗುತ್ತದೆ. ಏನಾದರೂ ಇದ್ದರೆ, ತಾವು ಈ ಬಗ್ಗೆ ಪ್ರತ್ಯೇಕವಾಗಿ ನನ್ನ ಗಮನಕ್ಕೆ ತನ್ನಿ.

ಶ್ರೀ ಟಿ.ಬಿ. ಜಯಚಂದ್ರ :- ಇದನ್ನು ನಾನು ಹೇಳುತ್ತಿಲ್ಲ. ಪತ್ರಿಕಾ ಮಾಧ್ಯಮಗಳಲ್ಲಿ ಬರುತ್ತಿದೆ ಎನ್ನುವುದನ್ನು ಹೇಳಿದೆ.

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು :- ನೀವು ನಿರ್ದಿಷ್ಟವಾಗಿ ಮಾತನಾಡಬೇಕಾಗುತ್ತದೆ. ಸುಮ್ಮನೆ vague ಆಗಿ ಮಾತನಾಡುವುದರಿಂದ ಪುನ: ಸಮಸ್ಯೆಯಾಗುತ್ತದೆ. ನೀವು ಚರ್ಚೆ ಮಾಡಿ. ಯಾರೂ ಬೇಡ ಎನ್ನುವುದಿಲ್ಲ. ಆದರೆ, ಯಾವುದೇ ಒಂದು ಸಂಸ್ಥೆ, ಯಾವುದೇ ಒಂದು ವ್ಯಕ್ತಿಯ ಬಗ್ಗೆ ನೀವು ಏನಾದರೂ ಹೇಳುವುದಾದರೆ, ಅದಕ್ಕೆ specific ಆಗಿ Notice ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ :- XXX XXX XXX

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಸ್ವಲ್ಪ ಮರ್ಯಾದೆ ಕೊಟ್ಟು ಮಾತನಾಡಿ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ನಿಮಗೆ ಕೇಳುವ ಸೌಜನ್ಯವಿಲ್ಲ, ತಾಳ್ಮೆಯಿಲ್ಲ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಿದ್ದಾರೆಂಬುದನ್ನು ಕೇಳಿ.

ಒಬ್ಬ ಮಾನ್ಯ ಸದಸ್ಯರು :- ಸರ್ಕಾರದ ದಬ್ಬಾಳಿಕೆ ನಡೆಯುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮುಂದುಗಡೆ ಕುಳಿತಿರುವವರನ್ನು ಸ್ವಲ್ಪ ಸುಮ್ಮನಿರಲು ಹೇಳಿ.

ಶ್ರೀ ಬಿ. ರಮಾನಾಥ ರೈ :- ವಿರೋಧ ಪಕ್ಷ ನಾಯಕರು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಿ.

ಶ್ರೀ ನೆ.ಲ. ನರೇಂದ್ರಬಾಬು : - ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಕೇಳುವಷ್ಟೂ ಸೌಜನ್ಯವಿಲ್ಲ, ತಾಳ್ಮೆಯಿಲ್ಲವೆಂದರೆ ಹೇಗೆ?

XXX ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

Sri Sureshkumar:- I am on a point of order.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ:- . . .ಯಾವುದೇ ನೈತಿಕ ಹಕ್ಕಿಲ್ಲ. ಭಯೋತ್ಪಾದನೆ ಮತ್ತು ನಕ್ಸಲೈಟ್ಸ್ ಕಾಂಗ್ರೆಸ್ಸಿಗರಿಂದಲೇ ಹುಟ್ಟಿದ್ದು. ಇವರಿಗೆ ನಾಚಿಕೆ ಯಾಗಬೇಕು.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ನಿಮ್ಮ ಸದಸ್ಯರಿಗೆ ಸ್ವಲ್ಪ ಹೇಳಿ ಸ್ವಾಮಿ.

ಶ್ರೀ ಎಂ.ಪಿ. ರೇಣುಕಾಚಾರ್ಯ :- ಸಂಘ ಪರಿವಾರದ ಬಗ್ಗೆ ಮಾತನಾಡಲು ಇವರಿಗೆ ಯಾವುದೇ ನೈತಿಕ ಹಕ್ಕು ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ಇವತ್ತು ನಿಲುವಳಿ ಸೂಚನೆಯ ಮೂಲಕ ಕೆಲವು ವಿಚಾರಗಳನ್ನು ಇಲ್ಲಿ ಮಂಡಿಸುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ :- ಸ್ವಲ್ಪ ಕುಳಿತುಕೊಳ್ರಿ ಸಾಕು.

(ಗೊಂದಲ)

XXX XXX XXX

(ಗೊಂದಲ)

ಶ್ರೀ ವೀರಣ್ಣ ಸಿ. ಚರಂತಿಮಠ :- ನೀವು ನಾಲಾಯಕ್..... XXX

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಸದನದಲ್ಲೇ ಈ ರೀತಿಯ ದಬ್ಬಾಳಿಕೆ. ಇನ್ನು ಹೊರಗಡೆ ಹೇಗಿರಬಹುದು?

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಬೇಕು.

XXX ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಆರ್. ಅಶೋಕ್ :- xxx xxx

ಒಬ್ಬ ಮಾನ್ಯ ಸದಸ್ಯರು :- xxx xxx

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸದನದ ಬಾವಿಗೆ ಬಂದರು)

ಅಧ್ಯಕ್ಷರು :- ಈ ರೀತಿಯಾದರೆ ಸದನ ನಡೆಸಲು ಸಾಧ್ಯವಾಗುವುದಿಲ್ಲ. ದಯವಿಟ್ಟು ಮಾನ್ಯ ಸದಸ್ಯರು ಸಹಕರಿಸಬೇಕು. ಪರಸ್ಪರ ಕೆಸರು ಚೆಲ್ಲುವಂತಾದ್ದಾಗಬಾರದು. ದಯವಿಟ್ಟು ಮಾನ್ಯ ಸದಸ್ಯರು ತಂತಮ್ಮ ಸ್ಥಳಗಳಿಗೆ ತೆರಳಬೇಕು.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಆರ್. ಅಶೋಕ್ :- xxx xxx xxx

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- xxx xxx xxx

ಅಧ್ಯಕ್ಷರು :- ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ, ಇದು ಒಳ್ಳೆಯದಲ್ಲ. ಸದನ ಇವತ್ತು ಉತ್ತಮ ರೀತಿಯಿಂದ ನಡೆಯುತ್ತಿದೆ. ನಿನ್ನೆ ಇಡೀ ದಿವಸ ಪೂರ್ತಿಯಾಗಿ ಒಳ್ಳೆಯ ವಿಷಯಗಳ ಕುರಿತು ಚರ್ಚೆಯಾಗಿದೆ. ಸದನವು ಒಳ್ಳೆಯ ರೀತಿಯಿಂದ ನಡೆಯುತ್ತಿದೆ. ಇಡೀ ಕರ್ನಾಟಕ ಜನತೆ ಈ ಸದನದಲ್ಲಿ ಏನು ಚರ್ಚೆಯಾಗುತ್ತಿದೆ ಎಂಬುದನ್ನು ನೋಡುತ್ತಿದ್ದಾರೆ. ದಯವಿಟ್ಟು ಎಲ್ಲ ಮಾನ್ಯ ಸದಸ್ಯರು ಸಹಕರಿಸಬೇಕು. ಒಳ್ಳೆಯ ವಿಷಯಗಳ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು. ಈ ರೀತಿಯ ನಡವಳಿಕೆ ಸರಿಯಲ್ಲ. ನಾನು ನಿನ್ನೆಯೇ ಹೇಳಿದ್ದೇನೆ. ಯಾವುದೇ ಸಂಸ್ಥೆ, ವ್ಯಕ್ತಿ ಬಗ್ಗೆ ಪರಸ್ಪರ

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ದೋಷಾರೋಪಣೆ ಮಾಡಬಾರದೆಂದು ಹೇಳಿದ್ದೇನೆ. ಈ ರೀತಿ ಪರಸ್ಪರ ದೋಷಾರೋಪಣೆ ಮಾಡುವುದರಿಂದಲೇ ಸಮಸ್ಯೆಗಳು ಉದ್ಭವವಾಗುತ್ತವೆ. ಇಷ್ಟೊಂದು Calling Attentions, ಸಾಕಷ್ಟು ಚರ್ಚೆ ಮಾಡುವ ವಿಷಯಗಳಿವೆ. ನೀವು ಈ ರೀತಿ ಅಸಹಕಾರ ನೀಡಿದರೆ ಯಾವುದೇ ವಿಷಯಗಳು ಚರ್ಚೆಯಾಗುವುದಿಲ್ಲ. ಜನತೆಗೆ ಈ ಸದನದಿಂದ ಯಾವುದೇ ರೀತಿಯ ಉಪಯುಕ್ತತೆ ಆಗುವುದಿಲ್ಲ. ಇವತ್ತು ಬೆಂಗಳೂರು ಬಿಟ್ಟು ಬೆಳಗಾವಿಯಲ್ಲಿ ಈ ಅಧಿವೇಶನ ನಡೆಸುವಂತಹ ಸಂದರ್ಭದಲ್ಲಿ ಈ ರೀತಿ ನೀವು ತೊಂದರೆ ಮಾಡುವುದಾದರೆ, ಜನರಿಗೆ wrong message ಹೋಗುತ್ತದೆ. ಬದಲಿಗೆ ಒಳ್ಳೆಯ ಸಂದೇಶ ಹೋಗುವುದಿಲ್ಲ. ಅದಕ್ಕೋಸ್ಕರ, ನೀವು ನಿಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ. ಈ ರೀತಿ ನೀವು ಪರಸ್ಪರ ಚರ್ಚೆ ಮಾಡುವುದು, ಕೂಗಾಡುವುದು, ಸದನದ ಬಾವಿಗೆ ಬಂದು ಕೂರುವುದು ಸದನದ ಗೌರವಕ್ಕೆ ಧಕ್ಕೆ ತರುತ್ತದೆ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ. ನೀವು ಈಗ ಬಾವಿಗೆ ಬಂದು ಏನು ಕೂಗಾಡುತ್ತಿದ್ದೀರಿ, ಪರಸ್ಪರ ದೋಷಾರೋಪಣೆ ಏನು ಮಾಡುತ್ತಿದ್ದೀರಿ, ಇದ್ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು :- ಈಗ ಸದನವನ್ನು ಹತ್ತು ನಿಮಿಷ ಮುಂದೂಡಲಾಗಿದೆ.

(ಸದನವನ್ನು ಮುಂದೂಡಲಾಯಿತು)

[ಪುನ: ಸದನ ಬೆಳಿಗ್ಗೆ 11 ಗಂಟೆ 55 ನಿಮಿಷಕ್ಕೆ ಆರಂಭವಾಯಿತು, ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೆ, ಇವತ್ತು ಬಹಳ ಮುಖ್ಯವಾಗಿರುವ ನಿಲುವಳಿ ಸೂಚನೆಯ ಮೂಲಕ ತಮ್ಮ ಗಮನವನ್ನು ನಾವು ಸೆಳೆಯಲು ಪ್ರಯತ್ನಪಟ್ಟಾಗ, ಕಾನೂನು ಸುವ್ಯವಸ್ಥೆ ಎಂದರೆನೇ ಸ್ವಲ್ಪ ಎನ್‌ರೇಜ್ ಆಗುವ ಸಂದರ್ಭವಿರುತ್ತದೆ. ಹಾಗಾಗಿ ನಾವು ಯಾವುದೇ ವಿಚಾರಗಳನ್ನು ಮಾತನಾಡುವಾಗ ಅದು ಸ್ವಾಭಾವಿಕವಾಗಿ ಬಂದಿರುವುದು. ಆದರೆ ಯಾರೇ

ಮಾತನಾಡಲಿ, ಸಂಘಸಂಸ್ಥೆಗಳ ಬಗ್ಗೆ ಆ ರೀತಿ ಆರೋಪಗಳನ್ನು ಯಾರೇ ಮಾಡಲಿ, ಅದು ಆ ಕಡೆ ಇರುವವರಾಗಿರಬಹುದು ಅಥವಾ ಈ ಕಡೆ ಇರುವವರಾಗಿರಬಹುದು, ಅದು ಸಾಧುವಾದುದ್ದಲ್ಲ, ಅದು ತಪ್ಪಾಗುತ್ತದೆ. ಇನ್ನು ನಾವು ಬೆಳಗಾವಿಯಲ್ಲಿ 4 ದಿವಸ ಅಧಿವೇಶನವನ್ನು ನಡೆಸುವಂಥ ಸಂದರ್ಭದಲ್ಲಿ ಸೌಹಾರ್ದಯುತವಾಗಿ ಇರಬೇಕು. ಏಕೆಂದರೆ, ಉತ್ತರ ಕರ್ನಾಟಕದ ಎಲ್ಲಾ ಜನರ ಗಮನ ಈ ಕಡೆ ಇರುವಂಥ ಸಂಧರ್ಭದಲ್ಲಿ ನಾವು ಒಳ್ಳೆಯ ರೀತಿಯಲ್ಲಿ ನಡೆದುಕೊಂಡೆವು, ಈ ಸಭೆ ಚೆನ್ನಾಗಿ ನಡೆಯಿತು ಎನ್ನುವ ಸಂದೇಶ ಇವತ್ತು ರವಾನೆಯಾಗಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ಇದನ್ನು ಹೆಚ್ಚು ಚರ್ಚೆ ಮಾಡದೆ, ಇದನ್ನು ಇಲ್ಲಿಗೆ ಮುಕ್ತಾಯ ಗೊಳಿಸಬೇಕು. ಬಹುಶ: ಆ ಪ್ರಚೋದನೆಗೆ ಈ ಕಡೆಯೂ ಪ್ರಚೋದನೆಯಾಗುತ್ತದೆ, ಆ ಕಡೆಯೂ ಪ್ರಚೋದನೆಯಾಗುತ್ತದೆ. ಅದನ್ನು ನಾವು ಇಲ್ಲಿಗೆ ಮರೆಯ ಬೇಕಾಗುತ್ತದೆ. ಈ ವರ್ಬಲ್ ಟಾಕ್ಸ್‌ನಿಂದಲೇ ಫಿಸಿಕಲ್ ಆಗಿ ಪ್ರಾಬ್ಲಂ ಬರುವುದು. ಮಾನ್ಯ ಅಭಯಚಂದ್ರರವರು, ಇವತ್ತು ಕರಾವಳಿ ಪ್ರದೇಶದಿಂದ ಬಂದಿರುವವರು, ಅವರಲ್ಲೂ ಕೂಡ ಈ ರೀತಿಯಾದ ಘಟನೆ ಇನ್ನು ಮುಂದೆ ನಡೆಯಬಾರದು, ಇವತ್ತು ಆದಂಥ ತಪ್ಪಿಗೆ ಒಂದು ರೀತಿಯಲ್ಲಿ ವಿಷಾದವನ್ನು ವ್ಯಕ್ತಪಡಿಸಬೇಕು ಎಂದು ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ, ಅಲ್ಲಿ ಅದನ್ನು ಮುಕ್ತಾಯ ಮಾಡೋಣ.

ಶ್ರೀ ಕೆ. ಅಭಯಚಂದ್ರ :- ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ಉಪನಾಯಕರು ಮಾತನಾಡುವಾಗ, XXX XXX XXX ಆಡಳಿತ ಪಕ್ಷದ ಸದಸ್ಯರು ಅವರಿಗೆ ಮಾತನಾಡುವುದಕ್ಕೆ ಅಡ್ಡಿಪಡಿಸಿದಂಥ ಸಂದರ್ಭದಲ್ಲಿ ಉದ್ವೇಗದಿಂದ ನಾನು ಆಡಿದಂಥ ಮಾತಿಗೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಯಾವುದೇ ಸಂಘಸಂಸ್ಥೆಗಳ ಬಗ್ಗೆ ನನಗೂ ಕೂಡ ಅಪಾರವಾದ ಗೌರವವಿದೆ. ಆದರೆ ನಮ್ಮ ನಾಯಕರು ಮಾತನಾಡುವ ಉದ್ವೇಗದಿಂದ ಆ ಶಬ್ದ ಬಳಕೆಯಾಗಿದೆ. ಅದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅದೇರೀತಿ ಆಡಳಿತ ಪಕ್ಷದ ಸದಸ್ಯರು ಸೌಹಾರ್ದದಿಂದ ವರ್ತಿಸಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಸಭಾಧ್ಯಕ್ಷರೆ, ಇವತ್ತು ಸದನದಲ್ಲಿ ನಡೆದಂಥ ಘಟನೆಗೆ ಅವಕಾಶ ಮಾಡಿಕೊಡಬಾರದಿತ್ತು. ಯಾವುದೇ ಸಂಘಟನೆಗಳ ಬಗ್ಗೆ ಆಗಲಿ, ವೈಯಕ್ತಿಕವಾಗಿಯಾಗಲಿ ಇಲ್ಲಿ ಟೀಕೆ ಮಾಡುವುದು ಒಳ್ಳೆಯದಲ್ಲ.

XXX ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಟೀಕೆ ಮಾಡುವ ಸಂದರ್ಭದಲ್ಲಿ ಆವೇಶದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಕೆಲವು ತಪ್ಪುಗಳು ಮಾಡಬಹುದು ಅದಕ್ಕೆ ಶಿಕ್ಷೆ ಕೊಡುವುದಕ್ಕೆ ತಮಗೆ ಅಧಿಕಾರ ಇದೆ. ಅದು ಬಿಟ್ಟು ಇಲ್ಲಿ ಗೊಂದಲದ ವಾತಾವರಣ ಸೃಷ್ಟಿ ಮಾಡುವುದು ಉದ್ದೇಶಪೂರ್ವಕವಾಗಿ ಹೊಡೆಯುತ್ತೇವೆ ಎನ್ನತಕ್ಕಂತಹ ಭಯದ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ತಾವು ದಯಮಾಡಿ ಮುಂದಿನ ದಿನಗಳಲ್ಲಿ ಅವಕಾಶವನ್ನು ಮಾಡಿಕೊಡಬಾರದು. ಯಾರೇ ತಪ್ಪು ಮಾಡಿದರೆ ಶಿಕ್ಷೆ ಕೊಡಿ. ಸಭಾ ನಾಯಕರಿದ್ದಾರೆ ವಿರೋಧ ಪಕ್ಷದ ನಾಯಕರಿದ್ದಾರೆ ಕರೆದು ಅವರಿಗೆ ಏನು ಬುದ್ಧಿ ಹೇಳಬೇಕೋ ಯಾವ ರೀತಿ ಶಿಕ್ಷೆ ಕೊಡಬೇಕೋ ಕೊಡಲಿ. ಆದರೆ ಇಲ್ಲಿ ಒಂದು ತರಹದಲ್ಲಿ ಭಯದ ವಾತಾವರಣವನ್ನು ಸೃಷ್ಟಿ ಮಾಡತಕ್ಕಂತಹ ಕೆಲಸಕ್ಕೆ ತಾವು ಮುಂದಿನ ದಿನಗಳಲ್ಲಿ ಅವಕಾಶ ಮಾಡಿಕೊಡಬಾರದು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್(ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ಏನು ಈ ಸದನದಲ್ಲಿ ನಾವು ಯಾರೂ ಕೂಡ ಬಯಸದ ಒಂದು ಘಟನೆ ಆಗಿದೆ. ಅದಕ್ಕೆ ಪ್ರಾಯಶ: ಒಬ್ಬ ವ್ಯಕ್ತಿ ಅಲ್ಲ ಇಡೀ ಸದನ ವಿಷಾದ ಪಡಬೇಕು. ನಾವೆಲ್ಲರೂ ಕೂಡ ಬಹಳ ಜವಾಬ್ದಾರಿಯುತ ವ್ಯಕ್ತಿಗಳು. ರಾಜ್ಯದಿಂದ 224 ಜನ ಆಯ್ಕೆಯಾಗಿ ಬಂದು ಈ ಸದನದಲ್ಲಿ ಕುಳಿತುಕೊಳ್ಳುವಂತಹ ಒಂದು ಭಾಗ್ಯವನ್ನು ನಾವು ಪಡೆದುಕೊಂಡಿದ್ದೇವೆ. ಇಂತಹ ಸ್ಥಳದಲ್ಲಿ ಕುಳಿತು ರಾಜ್ಯದ ಯಾವುದಾದರೂ ವಿಷಯದ ಬಗ್ಗೆ ಚರ್ಚೆ ಮಾಡುವಾಗ ಬಹಳ ಎಚ್ಚರಿಕೆಯಿಂದ ನಮ್ಮ ಜವಾಬ್ದಾರಿಯನ್ನು ಅರಿತು ನಾವು ಕೆಲಸ ಮಾಡಬೇಕಾಗಿದೆ. ವಿಶೇಷವಾಗಿ ಇವತ್ತು ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ. ಅಧಿವೇಶನ ಎಲ್ಲಿಯೇ ಆದರೂ ಕೂಡ ರಾಜ್ಯದ ಜನತೆ ನಮ್ಮ ನಡೆ ನುಡಿ ಮತ್ತು ವ್ಯವಹಾರಗಳನ್ನು ಬಹಳ ಕುತೂಹಲದಿಂದ ವೀಕ್ಷಿಸುತ್ತಿದೆ. ವಿಶೇಷವಾಗಿ ಲೈವ್ ರಿಲೇ ಇದೆ. ನಾವು ಏನೇ ಮಾತನಾಡಿದರೂ ಇಡೀ ರಾಜ್ಯದ ಜನರಿಗೆ ಆ ಸಕೆಂಡ್‌ನಲ್ಲಿ ತಿಳಿಯುತ್ತದೆ. ನಾನು ಸದನದ ಎರಡೂ ಕಡೆ ಸದಸ್ಯರಿಗೆ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಇಂತಹ ಪ್ರಸಂಗಗಳು ಮತ್ತೆ ಮರುಕಳಿಸಬಾರದು. ಇರುವ ಅವಕಾಶ ಕಡಿಮೆ ಎಂದು ನಾವೇ ಮತ್ತೆ ಮತ್ತೆ ಹೇಳುತ್ತೇವೆ. ಇಂತಹ ಒಂದು ಪ್ರಸಂಗದಲ್ಲಿ ಈ ರೀತಿ ಅನುಚಿತ ಘಟನೆ ಆದರೆ ಯಾವುದೇ ಒಂದು ಪ್ರಚೋದನೆಗೆ ಒಳಗಾಗಿ ಯಾವುದೇ ಉದ್ರೇಕಕ್ಕೆ ಒಳಗಾಗಿ ನಾವು ಮಾಡಬಾರದು. ನಾವು ಆ ಸ್ಥಿತಿಯಿಂದ ಮೇಲಿರುವವರು

ಎಂದು ಜನ ಭಾವಿಸುತ್ತಾರೆ. ನೀವೂ ಕೂಡ ಹೀಗೆಯೇ ಮಾಡುತ್ತೀರಿ ಎಂದು ಜನ ಅಂದರೆ ಅದು ಸರಿ ಹೋಗುವುದಿಲ್ಲ. ಅದಕ್ಕೋಸ್ಕರ ನಾನು ಇಡೀ ಸದನದ ಎರಡೂ ಕಡೆಯ ಸದಸ್ಯರಿಗೆ ನಾನು ಕೇಳಿಕೊಳ್ಳುವುದೇನೆಂದರೆ ಈ ರೀತಿಯ ಪ್ರಸಂಗ ಆಗಬಾರದು. ಆದಾಗ ನಾವೆಲ್ಲರೂ ಕೂಡ ತಲೆ ತಗ್ಗಿಸುವಂತಹ ಘಟನೆ ಎಂದು ಪ್ರತಿಯೊಬ್ಬರೂ ಕೂಡ ಅರಿತುಕೊಳ್ಳಬೇಕು. ಈ ಘಟನೆ ಆಗಿದ್ದಕ್ಕೆ ನಾವೆಲ್ಲರೂ ಕೂಡ ವಿಷಾದ ಪಡೋಣ. ಮುಂದೆ ಯಾವುದೇ ರೀತಿಯಿಂದ ಯಾವುದೇ ಸದಸ್ಯರು ಪ್ರಚೋದನೆಗೆ ಒಳಗಾಗಿ ಮಾತನಾಡುವುದು ಅದಕ್ಕೆ ಪ್ರತಿಕ್ರಿಯೆಯಾಗಿ ಇನ್ನೇನೋ ಆಗುವುದು ಆಗಬಾರದು. ಜವಾಬ್ದಾರಿಯುತವಾದ ಸದನವಾಗಿ ನಾವು ನಡೆಸೋಣ ಎಂದು ನಾನು ಕೇಳಿಕೊಂಡು ಆದ ಘಟನೆ ಬಗ್ಗೆ ನಾನು ಕೂಡ ವಿಷಾದದ ಧ್ವನಿಯನ್ನು ಸೇರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮಾನ್ಯ ಅಧ್ಯಕ್ಷರು :- ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದು ಈ ಸದನ ಅದರಲ್ಲಿಯೂ ಬೆಳಗಾವಿಯಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಈ ರೀತಿ ಘಟನೆಗಳು ಆಗಬಾರದು. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಮುಂದುವರೆಸುವುದು ಬೇಡ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಈ ಕಡೆಯಿಂದ ಸುರೇಶ್‌ಕುಮಾರ್‌ರವರು ಮಾತನಾಡಿದ್ದಾರೆ. ಅವರು ಏನಾದರೂ ಹೇಳಿದರೆ ಉತ್ತರ ಕೊಡುವುದಕ್ಕೆ ನಾವು ಇದ್ದೇವೆ. ನೀವು ಸಂಯಮದಿಂದ ಕುಳಿತುಕೊಳ್ಳಿ. ಏಕೆಂದರೆ ಇದು ವಿಶೇಷವಾದ ಅಧಿವೇಶನ. ಈ ರಾಜ್ಯದ ಜನ ನೋಡುತ್ತಿದ್ದಾರೆ. ಅವರ ಉದ್ದೇಶವೇ ನಿಮನ್ನು ಕೆರಳಿಸುವುದು. ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದಲ್ಲಿರುವವರು ಏನಾದರೂ ಮಾತನಾಡಿದಾಗ ಅದನ್ನು ಕೇಳಿ ಅಧ್ಯಕ್ಷರ ಗಮನಕ್ಕೆ ತಂದು ಸರಿಪಡಿಸಿಕೊಂಡು ಹೋಗೋಣ. ಇಲ್ಲದಿದ್ದರೆ ನಾಳೆ ಮೆಸೇಜ್ ಏನು ಬರುತ್ತದೆ, ಕೈ ಕೈ ಮಿಲಾಯಿಸಿದರು ಎಂದು ಬಂದು ಬಿಡುತ್ತದೆ. ಆದ್ದರಿಂದ ದಯಮಾಡಿ ಶಾಂತವಾಗಿ ಕುಳಿತುಕೊಳ್ಳಿ. ನಿಮ್ಮ ಭಾವನೆಗಳು ಏನಿವೆ ನಿಮ್ಮ ನಿಮ್ಮ ಸ್ಥಳಗಳಲ್ಲಿ ನಿಂತು ನೀವು ಮಾತನಾಡಿ. ಮೂರು ದಿನಗಳಿಂದ ಸದನದ ಕಾರ್ಯಕಲಾಪಗಳು ಬಹಳ ಒಳ್ಳೆಯ ರೀತಿಯಲ್ಲಿ ನಡೆಯುತ್ತಿವೆ. ಅವರು ಸಹಕಾರ

ಕೊಡುತ್ತಿದ್ದಾರೆ. ಇವತ್ತು ಅವರು ದುಡುಕಿ ಮಾತನಾಡಿದರೂ ಕ್ಷಮೆ ಕೇಳಿದ್ದಾರೆ. ಈ ವಿಷಯವನ್ನು ಇಲ್ಲಿಗೆ ಮುಗಿಸೋಣ. ಅಧ್ಯಕ್ಷರು ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡೋಣ.

ಅಧ್ಯಕ್ಷರು :- ನೆನ್ನೆ ಕೂಡ ಸದನದಲ್ಲಿ ಒಳ್ಳೆಯ ರೀತಿಯಲ್ಲಿ ಚರ್ಚೆ ಆಗಿದೆ. ಇವತ್ತೂ ಕೂಡ ಸಾಕಷ್ಟು ವಿಷಯಗಳನ್ನು ಚರ್ಚೆ ಮಾಡಿರುವುದು ಇದೆ. ಹೀಗಾಗಿ ಬಹಳ ಸೌಹಾರ್ದ ರೀತಿಯಿಂದ ಜನಸಾಮಾನ್ಯರಿಗೆ ಮತ್ತು ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆಗೆ ನಾವು ಆದ್ಯತೆಯನ್ನು ಕೊಡೋಣ. ಬೆಳಗಾವಿಯಲ್ಲಿ ವಿಶೇಷವಾದ ಅಧಿವೇಶನ ನಡೆಯುತ್ತಿರುವುದರಿಂದ ಇನ್ನೂ ಹೆಚ್ಚು ಆದ್ಯತೆ ಮೇಲೆ ಜನ ನೋಡುತ್ತಿದ್ದಾರೆ. ಅದಕ್ಕೆ ನಾವೆಲ್ಲರೂ ಆಡಳಿತ ಪಕ್ಷ ಇರಬಹುದು ಅಥವಾ ಪ್ರತಿ ಪಕ್ಷ ಇರಬಹುದು. ಎಲ್ಲಾ ಸದಸ್ಯರು ಗೌರವಯುತವಾದ ಮತ್ತು ಗಂಭೀರವಾದ ಚರ್ಚೆಗೆ ನಾವು ಹೆಚ್ಚು ಪ್ರಾಮುಖ್ಯತೆಯನ್ನು ಕೊಡೋಣ. ಯಾವುದೇ ಸಂಘ ಸಂಸ್ಥೆ ಅಥವಾ ಯಾವುದೇ ಒಂದು ವ್ಯಕ್ತಿ ಬಗ್ಗೆ ಯಾರೇ ಪ್ರಸ್ತಾಪ ಮಾಡುವಂತಹ ಸನ್ನಿವೇಶ ಬಂದಾಗ ಬಹಳ ಸಂಯಮವನ್ನು ಕಾಯ್ದುಕೊಂಡು ಹೋಗಬೇಕು. ಯಾವುದೇ ಭಾವೋದ್ವೇಗಕ್ಕೆ ಒಳಗಾಗಿ ಯಾವುದೇ ಶಬ್ದಗಳನ್ನು ನುಡಿಗಳನ್ನು ಹೇಳಿದಾಗ ಅದು ಈ ರೀತಿ ಸಂಘರ್ಷಕ್ಕೆ ಈಡು ಮಾಡುತ್ತದೆ. ಇಷ್ಟೊಂದು ವೇಳೆ ಅಪವ್ಯಯವಾಗಲಿಕ್ಕೆ ಸಾಧ್ಯವಿದೆ. ನನ್ನ ಕೊಠಡಿಗೆ ಕರೆದಾಗ ತಾವೆಲ್ಲಾ ಹಿರಿಯ ನಾಯಕರು ಮತ್ತು ಶಾಸಕರು ಬಂದು ಗೌರವಯುತವಾಗಿ ಮತ್ತು ಸೌಹಾರ್ದಯುತವಾಗಿ ಮುಗಿಸೋಣ ಎಂದು ಒಂದು ಒಪ್ಪಂದಕ್ಕೆ ಬಂದು ತಾವೆಲ್ಲರೂ ಸಹಕಾರ ಕೊಟ್ಟಿದ್ದೀರಿ ನಿಮಗೆಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸದನದ ಚರ್ಚೆಯನ್ನು ನಾವು ಮುಂದುವರೆಸೋಣ. ಕೆಲವರು ಎಮೋಷನಲ್ಲಾಗಿ ಕೆಲವು ಅಸಂಸದೀಯ ಶಬ್ದಗಳನ್ನು ಪ್ರಯೋಗ ಮಾಡಿದ್ದಾರೆ xxx xxx xxx ಅಂತಹವನ್ನು ಕಡತದಿಂದ ತೆಗೆದು ಹಾಕಲಿಕ್ಕೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಯಾರೇ ಸದಸ್ಯರು ತಮ್ಮ ಬಲಪ್ರದರ್ಶನ ಮಾಡುವಂಥದ್ದು ಮತ್ತು ಶಕ್ತಿ ಪ್ರದರ್ಶನ ಮಾಡುವಂಥದ್ದು ಆಗಬಾರದು. ಬಲಪ್ರದರ್ಶನ ಮಾಡುವಂತಹ ಮತ್ತು ಶಕ್ತಿ ಪ್ರದರ್ಶನ ಮಾಡುವಂತಹ ಅಖಾಡ ಇದು ಅಲ್ಲ. ಮಾತಿನ ಮಂಟಪ ಇದು. ಇಲ್ಲಿ ಚರ್ಚೆಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ನಮ್ಮ ಶಕ್ತಿ ಪ್ರದರ್ಶನ ಬಲಪ್ರದರ್ಶನ body language

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಇವುಗಳನ್ನು ಸದನದಲ್ಲಿ ಉಪಯೋಗ ಮಾಡದಾರದು. ಅದಕ್ಕಾಗಿ ಎಲ್ಲಾ ಸದಸ್ಯರೂ ಸಹಕಾರ ಮಾಡಬೇಕು ಎನ್ನುವಂತಹ ವಿನಂತಿ ಮಾಡಿಕೊಂಡು ಕಲಾಪ ನಡೆಸೋಣ. ಮಾನ್ಯ ಜಯಚಂದ್ರರವರು ಮುಂದುವರೆಸಿ. ಇವತ್ತು ಏನು ಅಸಂಸದೀಯ ಪದಗಳ ಪ್ರಯೋಗ ಆಗಿದೆ ಅದನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಅದಕ್ಕಾಗಿ ದಯವಿಟ್ಟು ಮಾದ್ಯಮದವರು ಆ ಶಬ್ದಗಳನ್ನು ಪತ್ರಿಕೆಗಳಲ್ಲಿ ಹಾಕಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ಕಾನೂನು ಸುವ್ಯವಸ್ಥೆ ಈ ರಾಜ್ಯದಲ್ಲಿ ಎಷ್ಟು ಮಟ್ಟಿಗೆ ಹದಗೆಟ್ಟಿದೆ ಎನ್ನುವುದಕ್ಕೆ ಅನೇಕ ರೀತಿಯ ವ್ಯಾಖ್ಯಾನಗಳು ಪುರಾವೆಗಳು ಬರುತ್ತಿರತಕ್ಕಂಥದ್ದು ನಾವು ನೋಡುತ್ತೇವೆ. ಶಾಸಕರ ಕೊಲೆಗೂ ಭಯೋತ್ಪಾದಕರು ಕೂಡ ಇದರಲ್ಲಿ ನಂಟು ಇರತಕ್ಕಂಥದ್ದು ಕೂಡ ಇವತ್ತು ಸಾಬೀತಾಗಿರುವುದು ಮಾಧ್ಯಮದಲ್ಲಿ ವರದಿಯಾಗಿದೆ. ಬೆಳಗಾವಿಯಲ್ಲಿ ಪೋಲೀಸರು ಜನವರಿ 13- 2009 ರಂದು ನಾಗರಾಜ್ ಅಡಿ ಬಸಪ್ಪ ಜಂಬಗಿ ನೇತೃತ್ವದ 9 ಜನ ಭಯೋತ್ಪಾದಕರನ್ನು ಬಂಧಿಸಿದಂತಹ ಸಂದರ್ಭದಲ್ಲಿ ಇವತ್ತು ಬಂದಿರತಕ್ಕಂತಹ ವರ್ತಮಾನ ಅಲ್ಲಿ ಸೀಸ್ ಮಾಡಿರತಕ್ಕಂತಹ ಮೆಟೀರಿಯಲ್ ಇದೆಲ್ಲವನ್ನೂ ನೋಡಿದಾಗ ನಾವು ಏನೋ ಒಂದು ರೀತಿಯಲ್ಲಿ ಭಯೋತ್ಪಾದನೆಗೆ ಪ್ರಚೋದನೆ ನೀಡುವುದು ನಡೆಯುತ್ತಿದೆಯೇ ಎನ್ನತಕ್ಕಂತಹ ರೀತಿಯಲ್ಲಿ ನಡೆಯುತ್ತಿದೆ. ಕರ್ನಾಟಕ ಶಾಂತಿಗೆ ಹೆಸರಾಗಿರತಕ್ಕಂತಹ ರಾಜ್ಯ. ಆ ರಾಜ್ಯದಲ್ಲಿ ಈ ರೀತಿಯಾಗಿ ಶಾಸಕರೇ ಆಗಿರತಕ್ಕಂತಹವರು ಮಾನ್ಯ ಸತೀಶ್ ಜಾರಕಿಹೊಳಿಯವರು ಮತ್ತು ರಮೇಶ್ ಜಾರಕಿಹೊಳಿಯವರು ಅವರಿಗೂ ಕೂಡ ರಕ್ಷಣೆ ಇಲ್ಲದೆ ಇರುವುದು ಪತ್ರಿಕೆಯಲ್ಲಿ ಬಂದಿರುವುದು ನೆನ್ನೆ ಮೊನ್ನೆ ತಾವು ಹಾಗೂ ನಾವೂ ಕೂಡ ಪತ್ರಿಕೆಗಳಲ್ಲಿ ನೋಡಿದ್ದೇವೆ. ಇದು ಎಲ್ಲೋ ಒಂದು ಕಡೆಗೆ xxx xxx xxx ಏಕೆಂದರೆ ಮಾತನಾಡುವ ಸಂದರ್ಭದಲ್ಲಿ ನಾವು ಅದನ್ನು clarify ಮಾಡಬೇಕು. ಏಕೆಂದರೆ ಮಾಧ್ಯಮದಲ್ಲಿ ಬಂದಿದೆ. ಇದನ್ನು ಸ್ವ ಇಚ್ಛೆಯಿಂದ ನಾವು ಹೇಳತಕ್ಕಂತಹ ಪ್ರಶ್ನೆ ಅಲ್ಲ. Deccan Herald ನಲ್ಲಿ ವರದಿ ಆಗಿರತಕ್ಕಂಥದ್ದು. 'Preliminary interrogations have proved that funds were flown from Karnataka through

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

Jambagi to the Maharashtra based Hindu organization which wanted to take . . . . .

ಶ್ರೀ ಶಿವಣ್ಣ :- ನೀವು ಹಿರಿಯ ಸದಸ್ಯರಾಗಿ ಈ ರೀತಿ ಹೇಳಿದರೆ ಸರಿ ಅಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಹೇಳಿದ್ದು ಸರಿ ಅಲ್ಲ ಎಂದು ಹೇಳಿ.

ಅಧ್ಯಕ್ಷರು :- ಅವರು ಏನು ಹೇಳುತ್ತಾರೆ ಕೇಳಿ ನೋಡೋಣ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಈ ಮನೆಗೆ 100 ಜನ ಹೊಸ ಶಾಸಕರು ಎರಡೂ ಕಡೆಯಿಂದ ಆಯ್ಕೆಯಾಗಿ ಬಂದಿದ್ದಾರೆ. ವಿರೋಧ ಪಕ್ಷದ ಕರ್ತವ್ಯ ಏನೆಂದರೆ ಸರ್ಕಾರವನ್ನು ಮಾತಿನಿಂದ ಚುಚ್ಚಬೇಕಾಗುತ್ತದೆ. ಟೀಕೆ ಮಾಡಬೇಕಾಗುತ್ತದೆ. ಅದು ಏನೇ ಟೀಕೆ ಮಾಡಿದರೂ ಕೂಡ ಸತ್ಯಾಂಶವನ್ನು ಹೊರಗೆ ತರಬೇಕೆನ್ನುವುದು ಇದೆ. ಮಾಧ್ಯಮದ ಮುಖೇನ ಹೊರಗಡೆ ನೋಡತಕ್ಕಂತಹ ಜನ ನಮ್ಮ ವರ್ತನೆ, ಟೀಕೆಗಳು, ಮಾತಿನ ಧಾಟಿ ಅದನ್ನು ತೀರ್ಮಾನ ಮಾಡತಕ್ಕಂತಹವರು ಹೊರಗಡೆ ಜನ. ಆದ್ದರಿಂದ ವಿರೋಧ ಪಕ್ಷದಲ್ಲಿ ನಾವು ಮಾತನಾಡಿದಾಗ ನನ್ನದು ಬಿಡಿ. ಮಾನ್ಯ ಯಡ್ಯೂರಪ್ಪನವರು ಇಲ್ಲಿ ಕೂತಿದ್ದಂತಹ ಸಂದರ್ಭದಲ್ಲಿ ನಾವು ಎಷ್ಟು ಸಹಿಸಿಕೊಂಡಿದ್ದೇವೆಂದು ಏನಾದರೂ ಗೊತ್ತಾ ಶಿವಣ್ಣರವರೇ. ಇವತ್ತು ಅವರು ಅಧಿಕಾರದಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿದ್ದಾರೆ. ನಮ್ಮ ಮಾತನ್ನು ಕೂಡ ಅವರು ಕೇಳಬೇಕಾಗುತ್ತದೆ. ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿರತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. ಪತ್ರಿಕೆಯಲ್ಲಿ ಬಂದಾಗ ಎಲ್ಲೋ ಒಂದು ಕಡೆ ಸಮುಜಾಯಿಷಿಯನ್ನು ಕೊಡಬೇಕಾಗುತ್ತದೆ. ಸತ್ಯಾಸತ್ಯತೆಯನ್ನು ಕಂಡುಹಿಡಿಯಬೇಕಾಗುತ್ತದೆ.

SHRI. T.B. JAYACHANDRA :- 'Preliminary interrogations have proved that the funds were flown from Karnataka through Jambagi to the Maharashtra based Hindu Organization, which wanted to take the revenge of the killing of Hindu by Islamic extremists group, the sources added. Sources also disclosed that he had personally handed over about Rs.40

lakhs to the Hindu Organization to carry out the extremist activities in August last year. Along with this team he used to extort, kidnap, murder people including political leader, who according to them have betrayed the Hindu ideology. The exploding bombs in the Court Hall in Hubli and placing two crude bombs under a bridge at Singanahally near Dharwad were part of this, they were planned to create hatred against a particular community and they are gaining political mileage during the elections'. ಈ ರೀತಿಯಾಗಿ ಹೇಳಲಾಗಿದೆ. It is a shocking news for us. ಅದು ಸತ್ಯ ಇರಬಹುದು ಅಥವಾ ಇಲ್ಲದೇ ಇರಬಹುದು. ಆದರೆ ಮಾಧ್ಯಮದಲ್ಲಿ ಬಂದಿರತಕ್ಕಂಥ ವಿಚಾರದ ಬಗ್ಗೆ ಸರ್ಕಾರದವರು ಕ್ಲಾರಿಫೈ ಮಾಡಬೇಕಾಗುತ್ತದೆ. ಏಕೆಂದರೆ ಇಂದು ಮಾಧ್ಯಮಕ್ಕೆ ತನ್ನದೇ ಆದಂಥ ವಿಶೇಷ ಸ್ಥಾನಮಾನ ಮತ್ತು ಗೌರವಗಳು ಇರತಕ್ಕಂಥದ್ದು ಕೂಡ ಎಲ್ಲರಿಗೂ ಗೊತ್ತಿದೆ. ಕರಾವಳಿ ಪ್ರದೇಶದಲ್ಲಿ ಆಗಿರತಕ್ಕಂಥದ್ದರ ಬಗ್ಗೆ ಬಂದಿರತಕ್ಕಂಥದ್ದು.

ಶ್ರೀ ಎಸ್. ಸುರೇಶ್‌ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :-ಮಾನ್ಯ ಅಧ್ಯಕ್ಷರೆ, I am on a point of order. ಹಿರಿಯ ಸದಸ್ಯರಾದ ಮಾನ್ಯ ಜಯಚಂದ್ರರವರಿಗೆ ನಿಲುವಳಿ ಸೂಚನೆ ಮೇಲೆ ಪಿಲಿಮನರಿ ಸಬ್‌ಮಿಶನ್‌ನಲ್ಲಿ ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ. ಯಾವುದೇ ನಿಲುವಳಿ ಸೂಚನೆಯಲ್ಲಿ law and order situation ಬಗ್ಗೆ ಪ್ರಸ್ತಾಪ ಮಾಡಲು ಬರುವುದಿಲ್ಲ. There are a number of rulings. Law and order ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ಎರಡನೆಯದಾಗಿ ಬಹಳ specific ಆಗಿ recent happenings ಬಗ್ಗೆ ನೀವು ನಿಲುವಳಿ ಸೂಚನೆ ತರಬೇಕಾಗುತ್ತದೆ. ಆದರೆ ನೀವು ಕಳೆದ ಎಂಟು ತಿಂಗಳುಗಳಲ್ಲಿ ಅನೇಕ ಘಟನಾವಳಿಗಳು ಆಗಿರುವಂಥದ್ದನ್ನು ಸೇರಿಸಿಕೊಂಡು ಆ ವಿಷಯಗಳ ಮೇಲೆ ಇಲ್ಲಿ ನಿಲುವಳಿ ಸೂಚನೆ ಮೂಲಕ ತಂದು

ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. It cannot become an omni bus discussion Mr.Roshan Baig. ಇದು Omni bus ನ hold all ಅಲ್ಲ. Specific, one incident, recent happening ಆಗಿರಬೇಕು. ಇನ್ನು ಮೂರನೆಯದಾಗಿ ಬಹಳ ಮುಖ್ಯವಾದುದು ಎಂದರೆ, Adjournment Motion not to be resorted to when there are other means of ventilating grievances. ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿರುತ್ತದೆ. ಆಗ ನೀವು ಈ ಪ್ರಸ್ತಾಪಗಳನ್ನೆಲ್ಲಾ ಮಂಡಿಸಿ. ಆಗ ಎಲ್ಲಾ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿ, ಎಲ್ಲಾ ವಿಚಾರಗಳನ್ನು dissect ಮಾಡಿ analysis ಮಾಡಿ ಏನು ಬೇಕಾದರೂ ನೀವು ಆಗ ಹೇಳಬಹುದು. When there is an avenue you cannot undertake this. ಇನ್ನು ನಾಲ್ಕನೆಯದಾಗಿ ಈಗಾಗಲೇ ಒಂದು ವಿಚಾರಣಾ ಆಯೋಗವನ್ನು ಸರ್ಕಾರ ನೇಮಿಸಿದೆ. ವಿಚಾರಣಾ ಆಯೋಗ ಅನೇಕ ಸಂಗತಿಗಳನ್ನು ತಿಳಿಯಲು ಈಗಾಗಲೇ ವಿಚಾರಣೆಯನ್ನು ನಡೆಸುತ್ತಿದೆ. ಆ ವಿಚಾರಣಾ ಆಯೋಗದ ಮುಂದೆ ಇರುವ ವಿಷಯಗಳನ್ನು ಇಲ್ಲಿ ಹೇಳುತ್ತಿದ್ದಿರಿ. ಇಲ್ಲಿ ನೋಡಿ ನೀವು ಪ್ರಸ್ತಾಪ ಮಾಡುತ್ತಿರುವ ವಿಷಯಗಳು. ಮತೀಯ ಅಲ್ಪಸಂಖ್ಯಾತ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ, ಕಳೆದ ಎಂಟು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟ ಪರಿಣಾಮ, ಜನಪ್ರತಿನಿಧಿಗಳ ಮೇಲೆ ದಾಳಿ ನಡೆಯುತ್ತಿರುವುದು, ಮಂಡ್ಯ ಜಿಲ್ಲೆಯ ಹಿರಿಯ ನಾಯಕರು ಮತ್ತು ಮಾಜಿ ಮಂತ್ರಿಗಳ ಮೇಲೆ ಹಲ್ಲೆ ನಡೆದಿರುವುದು, ಇವೆಲ್ಲವನ್ನೂ ಕೂಡ ನಾವು ಹೇಳುತ್ತಾ ಹೋದರೆ ಹೇಗೆ? ಯಾವುದಾದರೂ ಒಂದು specific issue ಇದರಲ್ಲಿ ಇದೆಯೆ? ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಇರುವಾಗ ಆ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ನೀವು ಇವೆಲ್ಲವುಗಳ ಬಗ್ಗೆ ಬೆಳಕನ್ನು ಚೆಲ್ಲಿ. Law and order situation ಬಗ್ಗೆ ಖಂಡಿತವಾಗಿ ನೀವು ನಿಲುವಳಿ ಸೂಚನೆ ಮೂಲಕ ತರುವುದಕ್ಕೆ ಆಗುವುದಿಲ್ಲ and there is no specific issue of recent happening. ಆದುದರಿಂದ ದಯವಿಟ್ಟು ಸಭಾಧ್ಯಕ್ಷರು ಇದಕ್ಕೆ ಅವಕಾಶವನ್ನು ಕೊಡಬಾರದು, there are a number of rulings, ಅದನ್ನು refer ಮಾಡಿ. ದಯವಿಟ್ಟು ಇದಕ್ಕೆ ಅವಕಾಶವನ್ನು ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ನಾನು ಗುರಿ ಇಟ್ಟಿರತಕ್ಕಂಥದ್ದರ ಬಗ್ಗೆ ಮೊದಲೇ ಮಾತನಾಡಲು ಪ್ರಾರಂಭ ಮಾಡುವಾಗಲೆ ಹೇಳಿದೆ, the ministry is creature of this House ಎನ್ನತಕ್ಕಂಥ ಮಾತನ್ನು ಬಳಸಿರತಕ್ಕಂಥ ಉದ್ದೇಶವೇನೆಂದರೆ, my argument is, it is the failure of the ministerial responsibility. You have failed in your responsibility. ನೀವು ಹೇಳುವ aspect ಅನ್ನು ನಾನು ಒಪ್ಪಿದರೆ law and order ವಿಚಾರದಲ್ಲಿ ಎಂದೋ ನಡೆದಿರತಕ್ಕಂಥದ್ದಲ್ಲ. Ministerial responsibility failure 8 ತಿಂಗಳಿನಲ್ಲಿ ಆಗಿದೆ. There is a default also and there are omissions and commissions also. For that the Government is responsible. ಆ ಉದ್ದೇಶದಿಂದ ನಾನು ಹೇಳುತ್ತೇನೆ. ಆದುದರಿಂದ ಈ ಕರಾವಳಿ ಪತ್ರಿಕೆಯಲ್ಲಿ . . .

ಶ್ರೀ ಎಸ್. ಸುರೇಶ್‌ಕುಮಾರ್ :-ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಒಂದು point of order raise ಮಾಡಿದ್ದೇನೆ. ದಯವಿಟ್ಟು ಅದಕ್ಕೆ ಮೊದಲು ಉತ್ತರ ಕೊಡಲಿ. ಅದರ ನಂತರ let him continue.

ಅಧ್ಯಕ್ಷರು :- ಜಯಚಂದ್ರರವರೆ, ಮಾನ್ಯ ಸುರೇಶ್‌ಕುಮಾರ್‌ರವರು points ಎತ್ತಿರುವುದಕ್ಕೆ ತಾವು ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ :- My reply is, failure of ministerial responsibility. The ministerial responsibility means, you are all working...I am telling...

ಶ್ರೀ ಎಸ್. ಸುರೇಶ್‌ಕುಮಾರ್ :- Ministerial responsibility ಇದೆ opposition party responsibility ಇದೆ, that is different. How can it come under adjournment motion? ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಮ್ಮಿಂದ ನನಗೆ ರೂಲಿಂಗ್ ಬೇಕು.

ಶ್ರೀ ಟಿ.ಬಿ. ಜಯಚಂದ್ರ :- ನಾವು ಈ ಸದನಕ್ಕೆ ಪ್ರವೇಶ ಮಾಡಬೇಕಾದರೆ ನಾವು ಪ್ರಮಾಣ ವಚನ ಸ್ವೀಕಾರ ಮಾಡಿದ್ದೇವೆ. ಪ್ರಮಾಣ ವಚನ ಸ್ವೀಕಾರ ಮಾಡುವುದರ ಮುಖೇನ ಇಡೀ ರಾಜ್ಯದ ಜನರಿಗೆ ನಾವು ಆಶ್ವಾಸನೆಯನ್ನು ಕೊಡುವವರಾಗಿದ್ದೇವೆ. ಸಂವಿಧಾನ ನಮ್ಮ ತಲೆ ಮೇಲೆ ಇದೆ. ಆ ಸಂವಿಧಾನದ ಅಡಿಯಲ್ಲಿ ...

ಅಧ್ಯಕ್ಷರು :- ಜಯಚಂದ್ರರವರೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳುತ್ತಿದ್ದಾರೆಂದರೆ, ಈ ಸಬ್ಜೆಕ್ಟ್‌ನಲ್ಲಿ ನೀವು ಮೂರ್ನಾಲ್ಕು ವಿಷಯಗಳನ್ನು ಕ್ರೋಡೀಕರಣ ಮಾಡಿಕೊಂಡು ಒಂದು ನಿಲುವಳಿ ಸೂಚನೆಯನ್ನು ತಾವೇನು ತಂದಿದ್ದೀರಿ ಅದು ನಿಯಮದಡಿಯಲ್ಲಿ ಬರುವುದೇ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ನಿಯಮದಡಿಯಲ್ಲಿಯೇ ಬರುತ್ತದೆ.

ಅಧ್ಯಕ್ಷರು :- ಹಾಗಾದರೆ ಅದರ ಬಗ್ಗೆ ತಾವು ಬೆಳಕು ಚೆಲ್ಲಿ.

SHRI. T.B. JAYACHANDRA :- Sir, It is the failure of the ministerial responsibility.

MR. SPEAKER :-Merit of the case is different. ಆದರೆ ಮಾನ್ಯ ಸುರೇಶ್‌ಕುಮಾರ್‌ರವರು ನಿಯಮಕ್ಕೆ ಸಂಬಂಧಪಟ್ಟಂತೆ ಹೇಳಿದ್ದಾರಲ್ಲ ಆ ಬಗ್ಗೆ ತಾವು ಬೆಳಕು ಚೆಲ್ಲಿ. Subject ಬಗ್ಗೆಯಲ್ಲ.

SRI. T.B. JAYACHANDRA :- I am trying to convince you. ನಾನು ನಿಯಮದಡಿಯಲ್ಲಿಯೇ ಹೇಳುತ್ತಿದ್ದೇನೆ. ನಾನು ತಮ್ಮನ್ನು ಮನವೊಲಿಸುತ್ತಿರುವುದೇನೆಂದರೆ, law and order ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ. ಎಲ್ಲೋ ಒಂದು ಕಡೆಯಲ್ಲಿ ತಾವು ಕಾನೂನು ಸುವ್ಯವಸ್ಥೆ ರಕ್ಷಣೆ ವಿಚಾರದಲ್ಲಿ ವಿಫಲರಾಗಿದ್ದೀರಿ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. 'Law and order situationcannot be the subject matter of an

adjournment motion. It is a well known proposition that law and order situation cannot be the basis for an adjournment motion. Therefore I cannot admit it and give my consent to the motion. Secondly, the Hon'ble Members have an opportunity to speak on that issue while participating in the debate before the House.'

ಶ್ರೀ ಟಿ.ಬಿ. ಜಯಚಂದ್ರ :-ಅದನ್ನು ನಾನು ಒಪ್ಪುತ್ತೇನೆ. ತಾವು Kaul and Shakdher ನಲ್ಲಿ ರೆಫರ್ ಮಾಡಿ. Ministerial responsibility - We have got every right to question under...

SRI SURESH KUMAR :- Through what means?

SRI. T.B. JAYACHANDRA :- Means is ನಿಲುವಳಿ ಸೂಚನೆ ನಿಯಮದಲ್ಲಿಯೇ ಇದೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಎಲ್ಲಿದೆ ಆ ನಿಯಮ ಹೇಳಿ. ದಯವಿಟ್ಟು ಓದಿ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ :-ತಕ್ಷಣದಲ್ಲಿ ನಮ್ಮ ಕಡೆ ಆ ಬುಕ್ ಇಲ್ಲ. ನೀವು ಬೇಕಾದರೆ Kaul and Shakdher ರೆಫರ್ ಮಾಡಿ ನೋಡಿ.

SRI SURESH KUMAR :- Recent happening ಒಂದು. It should be a specific issue.

ಶ್ರೀ ಆರ್. ರೋಷನ್‌ಬೇಗ್ :- ಸೀತಾರಾಂರವರ ವಿಷಯ recent happening ಅಲ್ಲವೆ? ಆ Journalist ಗೆ hand cuffs ಹಾಕಿ ಕರೆದುಕೊಂಡು ಹೋದರಲ್ಲ? ಅದು ರೀಸೆಂಟ್ ವಿಷಯವಲ್ಲವೆ?

ಶ್ರೀ ಎಸ್. ಸುರೇಶ್‌ಕುಮಾರ್ :-ಅವೆಲ್ಲವನ್ನೂ ಒಂದರಲ್ಲಿಯೇ ಸೇರಿಸುವುದಕ್ಕೆ ಆಗುವುದಿಲ್ಲ ರೋಷನ್‌ಬೇಗ್‌ರವರೆ. ಅವೆಲ್ಲವೂ recent happening ಅಲ್ಲ, specific issue ಅಲ್ಲ, Law and order ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. Enquiry Commission is...

ಶ್ರೀ ಆರ್. ರೋಷನ್‌ಬೇಗ್ :- ಸೀತಾರಾಂರವರ ವಿಷಯ recent happening ಅಲ್ಲವೆ?

ಶ್ರೀ ಎಸ್. ಸುರೇಶ್‌ಕುಮಾರ್ :- ಅದರ ಬಗ್ಗೆ ನೀವೇ ಪ್ರತ್ಯೇಕವಾಗಿ ಕೇಳಿ. Power of Attorney ಯನ್ನು ಅವರಿಗೆ ಕೊಡಬೇಡಿ. ನೀವೇ ಕೇಳಿ. ಅದು ಬೇರೆ ಪ್ರಶ್ನೆ.

ಶ್ರೀ ಟಿ.ಬಿ. ಜಯಚಂದ್ರ :-ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾದರೆ ಯಾವುದೇ ಆಧಾರವಿಲ್ಲದೆ ಮಾತನಾಡುವುದಿಲ್ಲ. Ministerial responsibility omissions, commissions ನಲ್ಲಿ, adjournment motion ನಲ್ಲಿ ಮೂವ್ ಮಾಡುವುದಕ್ಕೆ ಅವಕಾಶವಿದೆ. ತಾವು refer ಮಾಡಿ. I need not go back and refer the books.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ಇಲ್ಲಿ ಈಗ ನನ್ನ ಹತ್ತಿರ ಮಲ್ಹೋತ್ರಾರವರ ಬುಕ್ ರೆಫರೆನ್ಸ್ ಮಾಡಲು ಇದೆ. ಅದರಲ್ಲಿ ಏನು ಹೇಳಲಾಗಿದೆಯೆಂದರೆ, ' a matter is urgent only if it is of very recent occurrence and must be raised at the first available opportunity. Matters arising during the period when the House is not in Session should be raised on the first day the House meets. A matter which has been continuing for sometime cannot be raised through an adjournment motion. A matter even very recent occurrence is not urgent, if an

opportunity for its discussion will arise in the ordinary course of business within a reasonably short time ಈ ರೀತಿಯಲ್ಲಿ ಇದೆ. ಇದರಲ್ಲಿ ಅವರು ವಿಶ್ಲೇಷಣೆಯನ್ನು ಮಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, Ministerial responsibility, omissions, commissions...

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಜಯಚಂದ್ರರವರೆ, Ministerial responsibility should also be specific.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿಗಳು) :-ಮಾನ್ಯ ಜಯಚಂದ್ರರವರೆ, ನಿಮ್ಮ ಉದ್ದೇಶ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಬಗ್ಗೆ ಚರ್ಚೆ ಮಾಡಬೇಕೆಂಬುದಾಗಿದೆ. ಈ ವಿಷಯದ ಬಗ್ಗೆ ಚರ್ಚೆ ನಿಲುವಳಿ ಸೂಚನೆಯ ಮೇಲೆ ಮಾಡಲು ಬರುವುದಿಲ್ಲ. ಬೇರೆ ರೂಪದಲ್ಲಿ ಅದನ್ನು ಸದನದಲ್ಲಿ ತಂದು ಚರ್ಚೆ ಮಾಡಿ. ಆದರೆ ನಿಲುವಳಿ ಸೂಚನೆಯ ಮೂಲಕ ತಂದು ಚರ್ಚೆ ಮಾಡುವುದಕ್ಕೆ ನಿಯಮದಡಿಯಲ್ಲಿ ಬರುವುದಿಲ್ಲವೆಂದು ಹೇಳುತ್ತಿರುವುದು. ಆದುದರಿಂದ ನೀವು ಬೇರೆ ನಿಯಮದಡಿಯಲ್ಲಿ ತಂದು ಚರ್ಚೆ ಮಾಡಿ. ಚರ್ಚೆ ಬೇಡ ಎಂದು ಹೇಳುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸುರೇಶ್ ಕುಮಾರ್‌ರವರು ಎತ್ತಿದ ವಿಷಯಕ್ಕೆ ಸಭೆಯ ಗಮನಕ್ಕೆ, generally speaking, the subject matter of adjournment motion must have direct or indirect relation to the conduct of default on the part of the Government and must be in the nature of criticism of the action of the Government either for having done some action or for having omitted to do some action which is urgently necessary at the

moment. What do you say? Yes, we can raise. An adjournment motion is not admissible unless there was a failure on the part of the Government to perform the duties enjoyed by the Constitution of Law.

SRI S. SURESH KUMAR :- Again I am repeating, adjournment motion...

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೇ, ಮಾನ್ಯ ಮಹದೇವಪ್ಪನವರು ಏನೋ ಮಾತನಾಡುತ್ತಾರಂತೆ.

ಡಾ॥ ಹೆಚ್.ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು Law and Order ವಿಚಾರ adjournment motionನಲ್ಲಿ ಮಂಡನೆ ಮಾಡುವುದಕ್ಕೆ ಆಗುವುದಿಲ್ಲ. ಅದು recent incident ಆಗಿರಬೇಕು ಮತ್ತು public interest ಇರಬೇಕು, specific ಇರಬೇಕೆನ್ನುವ ನಿಯಮವನ್ನು ಎತ್ತಿದ್ದಾರೆ. ಮೊನ್ನೆ ಹಿರಿಯ ನಾಯಕರಾದಂತಹ ಮಾದೇಗೌಡರ ಮೇಲೆ ಗಲಾಟೆಯಾಯಿತು. ಗಲಾಟೆ ಮಾಡಿದಂತಹ ಒಬ್ಬರು Ex-MLAಗೆ Court ಬೇಲ್ ಕೊಡಲಿಲ್ಲ. ಭದ್ರಾವತಿಯಲ್ಲಿ city cable ಹಾಗೂ Ex-MLA ನಡುವೆ ಗಲಾಟೆಗಳಾಗಿ ಮಾರಣಾಂತಿಕ ಹಲ್ಲೆ ನಡೆಯಿತು. ಇಲ್ಲಿ recent ಆಗಿ ಈ ಮನೆಯ ಸದಸ್ಯರಾದಂತಹ ಸತೀಶ್ ಜಾರಕಿಹೊಳಿ, ರಮೇಶ್ ಜಾರಕಿಹೊಳಿ ಅವರನ್ನು ನಾವು ಕೊಲೆ ಮಾಡಬೇಕು, ಅದರಿಂದ ನಮಗೆ ಹೆಸರು ಬರುತ್ತದೆ, ಹಣ ಬರುತ್ತದೆ, ನಾವು terrorist ತರಹ ಬದುಕಬೇಕು ಎಂದು ಕೆಲವರ interrogation ಮುಖಾಂತರ ಗೊತ್ತಾಗಿರತಕ್ಕಂಥಾದ್ದು ಹುಬ್ಬಳ್ಳಿಯ ಬಾಂಬ್ ಪ್ರಕರಣಕ್ಕೆ ಸಂಬಂಧಪಟ್ಟಂಥ ಘಟನೆಯಲ್ಲಿ ತಿಳಿದುಬಂದಿದೆ. ಬೆಂಗಳೂರಿನಲ್ಲಿ ಹಾಡುಹಗಲೇ ವೃದ್ಧ ದಂಪತಿಗಳನ್ನು ಹಣಕ್ಕೋಸ್ಕರ ಕೊಲೆ ಮಾಡಿದ್ದಾರೆ. ಇವೆಲ್ಲ recent important public ಘಟನೆಗಳು ಮತ್ತು public importance ಅಲ್ಲವೇ? ಇಂತಹ ಘಟನೆಗಳು recent ಆಗಿದ್ದು, ಜನ ಪ್ರತಿನಿಧಿಗಳಿಗೆ ಬದುಕುವುದಕ್ಕೆ ವಾತಾವರಣ ಇಲ್ಲದಿದ್ದರೆ ಇದು ಎಂತಹ ಕಾನೂನು?

ಕಾನೂನಿನಿಂದ ಯಾವ ರೀತಿ ರಕ್ಷಣೆ ಮಾಡುತ್ತೀರಿ? Why don't you allow this motion to be moved?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ :- ತಾವು ಹೇಳಿದ್ದು ಅರ್ಥವಾಯಿತು, ಈ ರಾಜ್ಯದಲ್ಲಿ ಜನ ಪ್ರತಿನಿದಿಗಳಿಗೆ ಬದುಕುವುದಕ್ಕೆ ಅವಕಾಶ ಇಲ್ಲದಿದ್ದ ಮೇಲೆ ಯಾವರೀತಿಯ ಕಾನೂನು ಇಲ್ಲಿ ಇದೆ?

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಚರ್ಚೆ ಮಾಡಬಾರದೆಂದು ಹೇಳುತ್ತಿಲ್ಲ. Adjournment motion ಮೂಲಕ ಇದನ್ನು ಮಾಡಿದರೆ, this House will be creating a new precedent. Do we want that? ನೀವು ಚರ್ಚೆಯನ್ನು ಯಾವುದೇ ರೀತಿಯಲ್ಲಿ ತೆಗೆದುಕೊಂಡು ಬನ್ನಿ. ನಾವು ನಿನ್ನೆ ಗಣಿಗಾರಿಕೆ ವಿಚಾರದಲ್ಲಿ ಕೂಡ ಹೇಳಿದ್ದೇವೆ. ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ, ನೀವು ಮಾತನಾಡಿ ಎಂದು ಆಹ್ವಾನ ಕೂಡ ಕೊಟ್ಟಿದ್ದೇವೆ. Law and Order situation ಅನ್ನು ಈ adjournment motionನಲ್ಲಿ ಚರ್ಚೆ ಮಾಡುವುದಕ್ಕೆ ಬರುತ್ತದೆಯೇ? ಇವತ್ತು Governor's address ಇದೆ. ತಾವು ಈಗ ಎದ್ದು ನಿಂತು ಕೊಂಡು ಮಾತನಾಡುತ್ತಿದ್ದೀರಿ. You will be the first speaker, opening batsman from the opposition side. ನೋಡೋಣ ನೀವು ಎಷ್ಟು runs score ಮಾಡುತ್ತೀರೋ ಮಾಡಿ. ಆಗ ಈ ಅವಕಾಶವನ್ನು ಉಪಯೋಗಿಸಿಕೊಳ್ಳಿ, but not through adjournment motion. ಮಾನ್ಯ ಅಧ್ಯಕ್ಷರೇ, otherwise We will be setting a new precedent.

ಡಾ॥ ಹೆಚ್.ಸಿ ಮಹದೇವಪ್ಪ :- ಇದು public interest ಇರುವಂತಾದ್ದು.

SRI T.B. JAYACHANDRA :- I want the clarification from the Chair. ಮಾನ್ಯ ಸುರೇಶ್ ಕುಮಾರ್ ಹಾಗೂ ಮಾನ್ಯ ಮಹದೇವಪ್ಪನವರು ಯಾವುದನ್ನು ಆಧರಿಸಿ ಮಾತನಾಡುತ್ತಿದ್ದಾರೆ ಎನ್ನುವುದನ್ನು ನಾನು ಒಪ್ಪುತ್ತೇನೆ, ಇಲ್ಲವೆಂದು ಹೇಳುವುದಿಲ್ಲ. But what is

the reply from the Chair for this point? The subject matter of adjournment motion must have direct or indirect relation to the conduct and default on the part of the Government and must be in the nature of the criticism of the action of the Government either for having done some action or having omitted to do. Why do you saying all these things because, ಮಾನ್ಯ ಮಾದೇಗೌಡರ ಮೇಲೆ ಹಲ್ಲೆ ಆದಂತಹ ಸಂದರ್ಭದಲ್ಲಿ ಯಾವ ಪೊಲೀಸ್‌ನವರು ರಕ್ಷಣೆ ಕೊಡಬೇಕಾಗಿತ್ತು, ಅಪರಾಧಿಗಳನ್ನು arrest ಮಾಡಬೇಕಾಗಿತ್ತು, ಅವರು ಮಾನ್ಯ ಮುಖ್ಯಮಂತ್ರಿಗಳ ಪಕ್ಕದಲ್ಲಿ ಕುಳಿತಿದ್ದಾರೆ ಎಂದು ಹೇಳಿದರೆ, ಅವರಿಗೆ ರಕ್ಷಣೆ ಎಲ್ಲಿ ಇದೆ? ಇಲ್ಲಿ ನಿಮ್ಮಿಂದ default ಆಗುತ್ತಿಲ್ಲವೇ? ಇವತ್ತು ಯಾರು ಅಪರಾಧಿಗಳು ಎನ್ನುವವರು ಕೋರ್ಟಿಗೆ ಹೋಗಿ ಬೇಲ್ ಮೂವ್ ಮಾಡಿ ಬೇಲ್ ರಿಜೆಕ್ಟ್ ಆಗಿರುವವರು, ಒಂದು ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಕುಳಿತು ಮಾತನಾಡುತ್ತಾರೆ, ಆಗ ಪೊಲೀಸ್‌ನವರು ನಿರ್ಲಿಪ್ತರಾಗಿ ಕುಳಿತುಕೊಳ್ಳುತ್ತಾರೆಂದರೆ, is it not a failure on the part of the Government? Is it not a matter to be taken under the adjournment motion? ಇವತ್ತು ಇದು ಒಂದು ಉದಾಹರಣೆ. ಯಾರಿಗೆ? ಒಬ್ಬರಲ್ಲ ಮೂರು ಜನ ಶಾಸಕರು. ಇಲ್ಲಿ ನಾವೇನೂ ಹೇಳಿರಲಿಲ್ಲ. ಅವರಿಗೆ ರಕ್ಷಣೆ ಕೊಡಿ ಎಂದು ನಿಮ್ಮ ಮುಂದೆ ಕೇಳುವ ಸಂದರ್ಭ ಬಂದಾಗ, ಶಾಸಕರಿಗೆ ರಕ್ಷಣೆ ಇಲ್ಲವೆಂದಾಗ ರಾಜ್ಯದಲ್ಲಿ ಏನಾಗುತ್ತಿದೆ ಎಂದು ನೋಡಬೇಕು. ಒಂದು ಮುಖ್ಯ ವಿಷಯ ಹೇಳುತ್ತೇನೆ, ಭಯೋತ್ಪಾದನೆ ನಿಗ್ರಹಿಸಬೇಕಾಗಿರತಕ್ಕಂಥ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಆದರೆ ಅದನ್ನು ನಿಗ್ರಹಿಸಬೇಕಾದಂತಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿಯಾಗಿ ತೀರ್ಮಾನಗಳನ್ನು ಮಾಡುತ್ತಿದೆ ಎಂದು ತಾವು ಯೋಚನೆ ಮಾಡಬೇಕು. ನಾನು ಬಹಳ ಮುಖ್ಯವಾಗಿ ಇರತಕ್ಕಂಥ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರಿ ಆದೇಶ . . .

ಶ್ರೀ ಬಸವರಾಜ್ ದೊಮ್ಮಾಯಿ :- ಮಾನ್ಯ ಅಧ್ಯಕ್ಷರೇ, ನಿಮಗೆ ಹೇಳುವುದಕ್ಕೆ ಅವಕಾಶ ಇದೆ. ನೀವು ಇದಕ್ಕೆ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಕೊಟ್ಟಿದ್ದೀರಾ?

SRI T.B.JAYACHANDRA :- No. No, I am trying to convince him.

SRI BASAVARAJ BOMMAI :- No. I seek a ruling from the Hon'ble Speaker.

ಅಧ್ಯಕ್ಷರು :- ನಾನು ಹೇಳುತ್ತೇನೆ, ಮಾತನಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ನನಗೆ ಸಿರಾದಲ್ಲಿ ಕಾಲೇಜಿನಿಂದ ಒಂದು ಲೆಟರ್ ಬರುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಜಯಚಂದ್ರರವರು ಮಾತನಾಡುವುದು ಇಲ್ಲಿ ಪೂರ್ಣ ಪ್ರಮಾಣದ ಚರ್ಚೆ ಆಗಿಹೋಗಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಕೊನೆಯದಾಗಿ ಇದೊಂದು ವಿಚಾರ, ಈ ಮಾತಿನಿಂದ ಖಂಡಿತ convince ಆಗುತ್ತೀರಿ. ಕರ್ನಾಟಕ ಸರ್ಕಾರ ಸ್ವಾಮಿ ವಿವೇಕಾನಂದ . . .

ಶ್ರೀ ಬಿ.ಎನ್. ಬಚ್ಚೇಗೌಡ :- ಇದು ಪೂರ್ಣ ಪ್ರಮಾಣದ ಚರ್ಚೆ ಆಗಿ ಹೋಗಿದೆ.

ಶ್ರೀ ಟಿ.ಬಿ. ಜಯಚಂದ್ರ :- ಚರ್ಚೆ ಅಲ್ಲ ಸ್ವಾಮಿ ...

(ಗೊಂದಲ)

ಅಧ್ಯಕ್ಷರು :- ನಾನು ಹೇಳುತ್ತೇನೆ. I will give ruling.

ಶ್ರೀ ಟಿ.ಬಿ. ಜಯಚಂದ್ರ :- Gun men ಕೊಡಿ ಎಂದು ಅವರೇ ಶಾಸಕರಿಗೆ ಕೇಳಿದ್ದಾರೆ, ಕರ್ನಾಟಕ ಆ ಮಟ್ಟಕ್ಕೆ ಹೋಗಿರಲಿಲ್ಲ. ನೀವು ಅಧಿಕಾರಕ್ಕೆ ಬಂದ ಮೇಲೆ ಪ್ರಾರಂಭವಾಗಿದೆ. ಇವತ್ತು ಬಿಹಾರದಲ್ಲಿ, ಆಂಧ್ರ ಪ್ರದೇಶದಲ್ಲಿ ಇದೆ, ಆದರೆ ನಮ್ಮ ರಾಜ್ಯದಲ್ಲಿ ಇರಲಿಲ್ಲ.

(ಗೊಂದಲ)

ಅಧ್ಯಕ್ಷರು :- ಬಚ್ಚೇಗೌಡರೇ ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಅದನ್ನು ಆರಂಭ ಮಾಡಿರತಕ್ಕಂಥವರು ನೀವೇ. ನೀವೇ ಹೇಳಿದ್ದೀರಲ್ಲ, ಈ ಶಾಸಕರಿಗೆ ರಕ್ಷಣೆ ಕೇಳುವಂತಹ ಕೀಳುಮಟ್ಟಕ್ಕೆ ಕರ್ನಾಟಕ ಹೋಗಿಲ್ಲವೆನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆ ಮಟ್ಟಕ್ಕೆ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಹೇಳಬೇಕಾಗುತ್ತದೆ. ಏನು ಮಾತನಾಡುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ :- ನಿಮ್ಮ ಕಾಲದಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಭಟ್ಕಳ ಶಾಸಕರ ಕೊಲೆಯಾಗಿದೆ. ಅದಕ್ಕಿಂತ ಏನೂ ಕೆಟ್ಟಿಲ್ಲ ಸ್ವಾಮಿ. ನಿಮ್ಮ ಬೆನ್ನನ್ನು ನೀವು ನೋಡಿಕೊಳ್ಳಿ. ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಳ್ಳಿ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು :- ನಿಮ್ಮ ಶಾಸಕರನ್ನು ನಡು ಬೀದಿಯಲ್ಲಿ ಕೊಂದು ಹಾಕಿದಿರಲ್ಲ ನೋಡುತ್ತಿದ್ದೀರಲ್ಲ.

ಶ್ರೀ ಬಸವರಾಜ ಬೊಮ್ಮಾಯಿ :- ನಿಮ್ಮ ಕಾಲದಲ್ಲಿ ಶಾಸಕರ ಕೊಲೆಯಾಗಿದೆ, ನಿಮಗೆ ನಾಚಿಕೆಯಾಗಬೇಕು. ನಿಮಗೆ ಮಾತನಾಡುವುದಕ್ಕೆ ನೈತಿಕ ಹಕ್ಕಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :- ನೀವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ, ನಿಮಗೆ ಮಾತನಾಡುವುದಕ್ಕೆ ನೈತಿಕ ಹಕ್ಕಿಲ್ಲ.

ಅಧ್ಯಕ್ಷರು :- ನೀವು ಪರಸ್ಪರ ಚರ್ಚೆ ಮಾಡುವ ಹಾಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ :- ನಿಮ್ಮ ಅಪರಾಧಿ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳಿ.

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು :- ಇವರ ಕಾಲದಲ್ಲಿ ಶಾಸಕರನ್ನು ಕೊಂದು ಹಾಕಿದಾಗ . . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಭಯೋತ್ಪಾದನಾ ವಿರೋಧಿ ವಿದ್ಯಾರ್ಥಿ ಕಾರ್ಯಕ್ರಮ, ಇದೊಂದು ಸರ್ಕಾರಿ ಕಾರ್ಯಕ್ರಮ, ಎಲ್ಲಿ ನೋಡಿದರೂ ಸಹಸ್ರಾರು ಜನರು . . .

(ಗೊಂದಲ)

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೇ, ಈ ವಿಷಯವನ್ನು ನೀವು ಮುಂದುವರೆಸುವ ಮೊದಲು ನಾನು ಒಂದು ರೂಲಿಂಗ್ ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ವಸಂತ ಅಸ್ನೋಟಿಕರ್ ಕೊಲೆಯಾಯಿತು, ಚಿತ್ತರಂಜನ್ ಕೊಲೆಯಾಯಿತು, ನಾಗಪ್ಪರ ಕೊಲೆಯಾಯಿತು. ವಸಂತ ಅಸ್ನೋಟಿಕರ್ ಕೊಲೆಗೆ ಯಾರೂ ಕಾರಣ? ಚಿತ್ತರಂಜನ್ ಕೊಲೆಗೆ ಯಾರು ಕಾರಣ? ಉತ್ತರ ಹೇಳಿ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರು adjournment motion ಅನ್ನು ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟ ವಿಷಯವನ್ನು ಕೊಟ್ಟಿದ್ದೀರಿ. ಕಳೆದ ಎಂಟು ತಿಂಗಳ ಅವಧಿಯಲ್ಲಿ ನಡೆದಂತಹ ಘಟನೆಗಳ ಬಗ್ಗೆ ಎಂದು ಹೇಳಿದ್ದೀರಿ. ಅದರ ಜೊತೆಗೆ ಬೇರೆ ವಿಷಯಗಳನ್ನು ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. Government failure and law and order situation ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಚರ್ಚೆ ಮಾಡಬೇಕೆನ್ನುವ ಆಶಯವನ್ನು ವ್ಯಕ್ತ ಪಡಿಸಿದ್ದೀರಿ. ಮಾನ್ಯ ಸುರೇಶ್ ಕುಮಾರ್‌ರವರು ಇದನ್ನು ಈ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ತಾವು ರಾಜ್ಯಪಾಲರ ಭಾಷಣದಲ್ಲಿ ಮಾತನಾಡುವಾಗ ಪ್ರಸ್ತಾಪ ಮಾಡಬಹುದು. ಆದರೂ ಕೂಡ ನೀವು ಇದಕ್ಕೆ ಆದ್ಯತೆ ಕೊಡಬೇಕೆಂದು ಹೇಳಿ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಆದರೆ ಇದರ ಬಗ್ಗೆ ಹಿಂದಿನ rulings ನೋಡಿದರೆ ಮಲ್ಹೋತ್ರಾ ಪುಸ್ತಕದಲ್ಲಿ ಇರುವಂತಹ interpretation ನೋಡಿದಾಗ ಕಳೆದ ಎಂಟು ತಿಂಗಳ ಅವಧಿಯಲ್ಲಿ ನಡೆದಂತಹ ಘಟನೆಗಳು ಈ ಒಂದು adjournment motionನಲ್ಲಿ ಬರುವುದಿಲ್ಲವೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಇದನ್ನು ರೂಲ್ 69ಕ್ಕೆ convert ಮಾಡಿ, ತಾವು ಚರ್ಚೆಯನ್ನು ಮುಂದುವರೆಸಬಹುದು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :- ಶ್ರೀ ಅಸ್ನೋಟಿಕರ್‌ರವರನ್ನು ಕೊಲೆ ಮಾಡಿದರು, **(ಗೊಂದಲ)** ಡಾ॥ ಚಿತ್ತರಂಜನ್‌ರವರನ್ನು ಕೊಲೆ ಮಾಡಿದರು,

(ಗೊಂದಲ).

ಅಧ್ಯಕ್ಷರು :- ದಯವಿಟ್ಟು ಒಂದು ನಿಮಿಷ. ನಾನು ರೂಲಿಂಗ್ ಕೊಡುತ್ತಿದ್ದೇನೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :- ಅವತ್ತು ಮಾಡಿಸುವಾಗ ಚೆನ್ನಾಗಿತ್ತಂತೆ ಇವತ್ತು ಚೆನ್ನಾಗಿಲ್ಲವಂತೆ, ಮೂರು ಜನ ಶಾಸಕರನ್ನು ಕೊಲೆ ಮಾಡಿದ್ದಾರೆ.

ಅಧ್ಯಕ್ಷರು :- ನಿಮ್ಮ ಈ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ convert ಮಾಡಿ, Rule 69ರಲ್ಲಿ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೇನೆ. ತಾವು ಚರ್ಚೆಯನ್ನು ಮುಂದುವರೆಸಬಹುದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಸ್ವಾಮಿ ವಿವೇಕಾನಂದ ಜಯಂತಿಗೂ ಭಯೋತ್ಪಾದನೆಗೂ ಏನು ಸಂಬಂಧ? ಸ್ವಾಮಿ ವಿವೇಕಾನಂದರವರನ್ನು ಇಡೀ ಹಿಂದೂಗಳಲ್ಲ, ಭಾರತ ದೇಶವೇ ಅಲ್ಲ, ಇಡೀ ಪ್ರಪಂಚವೇ ಮೆಚ್ಚುವಂಥ ಒಬ್ಬ ವ್ಯಕ್ತಿ, ವ್ಯಕ್ತಿಯಲ್ಲ ಶಕ್ತಿ. ಸ್ವಾಮಿ ವಿವೇಕಾನಂದರ ಮಾತುಗಳನ್ನು ಕೇಳಿದರೆ ನಮಗೆ ಯಾವ ವೇದಗಳು ಬೇಕಾಗಿಲ್ಲ, ಪುರಾಣಗಳು ಬೇಕಾಗಿಲ್ಲ. ಅಂಥ ಒಬ್ಬ ದೊಡ್ಡ ವ್ಯಕ್ತಿ. ಇಲ್ಲಿ ವಿವೇಕಾನಂದರಿಗೂ ಭಯೋತ್ಪಾದನೆಗೂ ಥಳಕು ಹಾಕುವಂಥ ಕೆಲಸವಿದೆಯಲ್ಲಾ, ಅದರ ಜೊತೆಗೆ ನೀವು ಕಾರ್ಯಕ್ರಮವನ್ನು ರೂಪಿಸಿದ್ದೀರಿ. ಈ ರೀತಿ ಕಾರ್ಯಕ್ರಮವನ್ನು ರೂಪಿಸುವಾಗ ಕರ್ನಾಟಕ ಸರ್ಕಾರದಿಂದ ಒಂದು ಕರಡು ನೀತಿ, ಕರಡು ಯೋಜನೆ, ಈ ಕರಡು ಯೋಜನೆ ಎಷ್ಟು ಚೆನ್ನಾಗಿದೆಯೆಂದರೆ ಇದೆಲ್ಲವನ್ನು ನಾನು ಇಲ್ಲಿ ಓದಬೇಕೆಂದರೆ ಒಂದು ಗಂಟೆ ಕಾಲಾವಕಾಶ ಬೇಕಾಗುತ್ತದೆ. ಇದು ಅಷ್ಟು ದೊಡ್ಡದಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಆದೇಶದ ಮೇಲೆ ಉನ್ನತ ಶಿಕ್ಷಣ ಸಚಿವರು ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿದ್ದಾರೆ. ಇವತ್ತು ಆ ಕಾರ್ಯಕ್ರಮದ ಪ್ರಸ್ತಾವನೆ ಏನು ಇದೆ, ಆ ಪ್ರಸ್ತಾವನೆಯಲ್ಲಿ ದೊಡ್ಡ ಅಜೆಂಡಾ ಇದೆ. ಆ ಅಜೆಂಡಾ ಏನೆಂಬುದನ್ನು ಹೇಳುವುದಕ್ಕೆ ಹೋದರೆ, ಬಹುಶ: ಅದು ಎಲ್ಲಾ ಶಾಸಕರಿಗೆ ತಲುಪಿರುತ್ತದೆ. ತಾವು ಅದನ್ನು ತರಿಸಿ ನೋಡಬೇಕು. ಆ ಕಾರ್ಯಕ್ರಮದ ಉದ್ದೇಶ, ಕಾರ್ಯಕ್ರಮದ ರೂಪುರೇಷೆಗಳು, ಕಾಲೇಜು ಮಟ್ಟದಲ್ಲಿ, ತಾಲ್ಲೂಕು

ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ , ವಲಯ ಮಟ್ಟದಲ್ಲಿ, ವಿಶ್ವವಿದ್ಯಾಲಯದ ಮಟ್ಟದಲ್ಲಿ, ಈ ಕಾರ್ಯಕ್ರಮಗಳು ಆಗಬೇಕು. ಅದಕ್ಕೆ ಅಧ್ಯಕ್ಷರುಗಳು ಯಾರೆಂದರೆ ತಾಲ್ಲೂಕು ಮಟ್ಟದಲ್ಲಿ ಶಾಸಕರು, ಕಾಲೇಜು ಮಟ್ಟದಲ್ಲಿ ಪ್ರಾಂಶುಪಾಲರುಗಳು ಇದ್ದಾರೆ. ಕಾಲೇಜ್ ಮಟ್ಟದಲ್ಲಿ ಜರುಗಬೇಕಾದಂಥ ಈ ಚಟುವಟಿಕೆಗಳಿಗೆ ನಿರ್ದಿಷ್ಟವಾದಂಥ ರೀತಿಯಲ್ಲಿ ಭಯೋತ್ಪಾದನೆ ಕುರಿತ ಪ್ರಬಂಧ, ಭಾಷಣ, ಚರ್ಚಾ ಸ್ಪರ್ಧೆಗಳು, ರಾಷ್ಟ್ರ ಗೀತೆ, ಚಿತ್ರಗೀತೆ, ಇದೆಲ್ಲವೂ ದೊಡ್ಡ ವೈಭವೀಕರಿಸುವಂಥ ವಿಚಾರಗಳು ಆಗಿರುವಂಥಾದ್ದು. ಇದನ್ನು ನಾವು ಹೇಳುತ್ತೇವೆ. ನಾನು ಇವತ್ತು ಸ್ವಾಮಿ ವಿವೇಕಾನಂದರ ವಿಚಾರವನ್ನು ಬಿಟ್ಟು ಬೇರೊಂದು ಸರ್ಕಾರದ ಕಾರ್ಯಕ್ರಮವೆಂದರೆ ಸಾವಿರಾರು ಜನ ಮಕ್ಕಳನ್ನು ಸೇರಿಸುತ್ತಾರಲ್ಲಾ, ಅದಕ್ಕೆ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ? ಅಧಿಕೃತವಾಗಿ ಸರ್ಕಾರದ ಯೋಜನೆಯಾಗಿರುವುದರಿಂದ ಅದಕ್ಕೆ ಸರ್ಕಾರ ಹಣವನ್ನು ಖರ್ಚು ಮಾಡಲೇ ಬೇಕು. ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತದೆ? ಯಾವ ಆಧಾರದ ಮೇಲೆ ಮಾಡುತ್ತಿದೆ? ಅದಕ್ಕೆ ಯಾರ ಒಪ್ಪಿಗೆಯನ್ನು ತೆಗೆದುಕೊಂಡಿದೆ? ತೀರ್ಮಾನ ಮಾಡಿರುವವರು ಯಾರು? ಇದನ್ನು ಸಚಿವ ಸಂಪುಟ ತೀರ್ಮಾನ ಮಾಡಿದೆಯೋ? ಯಾರು ಮಾಡಿದ್ದಾರೆ? ಭಯೋತ್ಪಾದನೆ ವಿರುದ್ಧವಾಗಿ ನಾವು ನಾಗರೀಕ ಸರ್ಕಾರ ಮಾಡಬೇಕಾಗಿರುವಂಥಾದ್ದು ಎಂದರೆ ನಾವು ನಮ್ಮದೇ ಆದಂಥ ರೀತಿಯಲ್ಲಿ ಇವತ್ತು ನಾವು ಕೇಂದ್ರ ಸರ್ಕಾರದ ಸಹಾಯವನ್ನು ಕೇಳದೇ ಪರ್ಯಾಯವಾಗಿ ರತಕ್ಕಂಥ ರೀತಿಯಲ್ಲಿ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವಂಥಾದ್ದಕ್ಕೆ ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೆ. ಆ ಕಾರ್ಯಕ್ರಮ ಹಾಕುವುದನ್ನು ಬಿಟ್ಟು ನಾವು ಇವತ್ತು ಜನಗಳನ್ನು ಹುರಿದುಂಬಿಸುವಂಥಾದ್ದು, ಇವತ್ತು ಭಾವನಾತ್ಮಕ ವಿಚಾರಗಳನ್ನು ಮಕ್ಕಳ ಮನಸ್ಸಿನಲ್ಲಿ ತುಂಬುವಂಥಾದ್ದು ಇದು ಎಂಥ ಕೆಲಸ? ನೀವು ಭಯೋತ್ಪಾದನೆಯ ಬಗ್ಗೆ ಅರಿವು ಮೂಡಿಸಿ, ಅದನ್ನು ಮಾಡುವಂಥವರು ಬೇಕಾದಷ್ಟು ಜನರಿದ್ದಾರೆ. ಇವತ್ತು ಎಲ್ಲರಿಗೂ ಗೊತ್ತಿದೆ, ಮಾಧ್ಯಮಗಳಲ್ಲಿ ಸಾಕಷ್ಟು ಮಾಹಿತಿಗಳು ಬಂದಿವೆ. ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ತಾವು ಅಧಿಕಾರಕ್ಕೆ ಬಂದ ಪೂರ್ವದಲ್ಲಿ ಉಪ ಮುಖ್ಯ ಮಂತ್ರಿಗಳಾಗಿದಂಥ ಸಂದರ್ಭದಲ್ಲಿ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿರಿ. ಗೋಲ್ವಲ್ಕರ್‌ರವರ ಜನ್ಮ ದಿನೋತ್ಸವವನ್ನು ವಿರಾಟ್ ಹಿಂದೂ ಸಮಾವೇಶವೆಂದು ಹೇಳಿ, ಇಡೀ ರಾಜ್ಯದಲ್ಲಿ, ಇಡೀ ದೇಶದಲ್ಲಿ ಎಲ್ಲಿ ನೋಡಿದರೂ ಕೇಸರಿ ಬಾವುಟ ಹಾರಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡಿದಿರಿ. ನಾನು ಒಂದು

ವಿಚಾರವನ್ನು ಹೇಳುವುದೆನೆಂದರೆ ಅದು ನಿಮ್ಮ ಪಕ್ಷದ ತೀರ್ಮಾನ. ಅದು ಸರ್ಕಾರದ ಕಾರ್ಯಕ್ರಮವಲ್ಲ. ನೀವು ತೀರ್ಮಾನ ಮಾಡಿದಂಥ ಸಂದರ್ಭದಲ್ಲಿ ನಾನು ಒಂದು ಮಾತನ್ನು ಕೇಳುವುದೇನೆಂದರೆ ಗೋಲ್ವಲ್ಕರ್‌ರವರಿಗೂ ಹಿಂದೂ ಸಮಾಜೋತ್ಸವಕ್ಕೂ ಸಂಬಂಧವಿದೆ. ಈ ಗೋಲ್ವಲ್ಕರ್ ಯಾರು? ಇವರು ಯಾರೆಂಬುದು ಇಲ್ಲಿ ಯಾರಿಗೂ ಗೊತ್ತಿಲ್ಲ. ಮಹಾತ್ಮ ಗಾಂಧೀಜಿಯವರು ಕೊಲೆ ಆದಂಥ ಸಂದರ್ಭದಲ್ಲಿ ಪ್ರಪ್ರಥಮವಾಗಿ arrest ಆದಂಥ ವ್ಯಕ್ತಿಯೆಂದರೆ ಗೋಲ್ವಲ್ಕರ್‌ರವರಾಗಿದ್ದಾರೆ. ಆನಂತರ ಅವರು ಬಿಡುಗಡೆಯಾಗಿರಬಹುದು, ಅದು ಬೇರೆ ಪ್ರಶ್ನೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ತಾವು ಈ ರೀತಿ ಅಪ್ರಸ್ತುತವಾದಂಥ ವಿಷಯವನ್ನು ಪ್ರಸ್ತಾಪ ಮಾಡಿ ಸಂಘರ್ಷಕ್ಕೆ ಅವಕಾಶ ಮಾಡಿ ಕೊಡುತ್ತೀರಿ. ತಾವು ದಾಖಲೆ ಕೊಡಿ.

SRI T.B. JAYACHANDRA :- It is in record.

(ಗೊಂದಲ)

ಅಧ್ಯಕ್ಷರು :- ಈ ರೀತಿ ವಿಷಯವನ್ನು ಪ್ರಸ್ತಾಪ ಮಾಡುವುದರ ಮುಖಾಂತರ ಪದೇ ಪದೇ ಸದನವನ್ನು ಶಾಂತ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ತೊಂದರೆ ಮಾಡುವಂಥಾದ್ದು ಆಗುತ್ತದೆ. ಈ ರೀತಿ ಇಲ್ಲದೇ ಇರುವಂಥ ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು ಸರಿಯಲ್ಲ. ನೀವು ಯಾವ ವಿಷಯವನ್ನು ಹೇಳಬೇಕೆಂದು ಇದ್ದೀರಿ, ಅದನ್ನು ಹೇಳಿ. ನಾನು ಮಾನ್ಯ ಜಯಚಂದ್ರರವರೆ ನಿನ್ನೆಯಿಂದಲೂ ಹೇಳುತ್ತಿದ್ದೇನೆ. ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ, ಯಾವುದೇ ಒಂದು ಸಂಸ್ಥೆಯ ಬಗ್ಗೆ ನೀವು ಏನಾದರೂ ವಿಷಯಗಳನ್ನು ಪ್ರಸ್ತಾಪ ಮಾಡುವುದಿದ್ದರೆ, ಅವರ ಮೇಲೆ ಏನಾದರೂ ಅಪಾದನೆಯನ್ನು ಮಾಡುವುದಿದ್ದರೆ, ಅದರ ಬಗ್ಗೆ ಮೊದಲು ನೋಟೀಸನ್ನು ಕೊಡಿ. ಅದನ್ನು ಬಿಟ್ಟು ಈ ರೀತಿ ನೀವು ಪ್ರಸ್ತಾಪ ಮಾಡುವುದು ಸರಿಯಲ್ಲ. No, No. I will not allow you. (ಗೊಂದಲ). ಈ ಪದ ಪ್ರಯೋಗವನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಮಾನ್ಯ ಟಿ.ಬಿ. ಜಯಚಂದ್ರರವರು ಬಳಸಿದ ಪದವನ್ನು ಕಡತದಿಂದ ತೆಗೆಯುವಂತೆ ತಿಳಿಸಿರುತ್ತಾರೆ)

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಹಣಕಾಸನ್ನು ಖರ್ಚು ಮಾಡಿದ್ದಿರಾ.. ...

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ನಾನು ಪದೇ ಪದೇ ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :- ತಾವು ಸ್ವಾಮಿ ವಿವೇಕಾನಂದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ, ಭಯೋತ್ಪಾದನೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ, ಹಿಂದೂ ಸಮಾಜೋತ್ಸವದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ, ಸರ್ಕಾರ ಈ ಭಯೋತ್ಪಾದಕರ ಬಗ್ಗೆ ವಿದ್ಯಾರ್ಥಿಗಳು ಜಾಗೃತಿಯಾಗಬೇಕೆಂದು ಏಕೆ ಅಪೇಕ್ಷೆ ಪಡುತ್ತಿದೆಯೆಂದರೆ, ಸ್ವಾಮಿ ವಿವೇಕಾನಂದರು ಒಂದು ಕರೆಯನ್ನು ಕೊಟ್ಟಿದ್ದರು. ನನ್ನ ಕೈಗೆ ನೂರು ಜನ ಯುವಕರು ಸಿಕ್ಕರೆ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತರುತ್ತೇನೆಂದು ಹೇಳಿದ್ದರು. ಇಡೀ ಕರ್ನಾಟಕ ರಾಜ್ಯದಲ್ಲಿದ್ದ ವಿದ್ಯಾರ್ಥಿ ಸಮೂಹಕ್ಕೆ ಈ ದೇಶದ್ರೋಹಿ ಭಯೋತ್ಪಾದಕರು, ಮತಾಂಧ ಪಾಕಿಸ್ತಾನದ ಬೆಂಬಲಿತ ಭಯೋತ್ಪಾದಕರನ್ನು ನಿಗ್ರಹ ಮಾಡಬೇಕಾದರೆ ಆ ವಿದ್ಯಾರ್ಥಿಗಳು ಜಾಗೃತಿಯಾದರೆ ಮಾತ್ರ ಎಂದು ತೀರ್ಮಾನ ಮಾಡಿರುವಂಥ ಸರ್ಕಾರ ಇದು. ಅದಕ್ಕೋಸ್ಕರ ಸ್ವಾಮಿ ವಿವೇಕಾನಂದರ ರಕ್ತವನ್ನು ಹಂಚಿಕೊಂಡಿರುವಂಥ ವಿದ್ಯಾರ್ಥಿಗಳು, ಯುವಕರು, ರಾಷ್ಟ್ರ ಭಕ್ತರಾಗಿ ಈ ದೇಶದ್ರೋಹಿ ಭಯೋತ್ಪಾದಕರನ್ನು ನಿರ್ನಾಮ ಮಾಡುವುದಕ್ಕೋಸ್ಕರ ಈ ಸರ್ಕಾರ ಜಾಗೃತಿ ಕಾರ್ಯಕ್ರಮವನ್ನು ಹಾಕಿಕೊಂಡಿರುವಂಥಾದ್ದು. ಎರಡನೆಯದಾಗಿ ತಾವು ಮಹಾತ್ಮ ಗಾಂಧೀಜಿಯವನ್ನು ಕೊಲೆ ಮಾಡಿದಂಥ ಸಂಸ್ಥೆ ಎಂದು ಭಾವಿಸಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ :- ಸಂಸ್ಥೆ ಎಂದು ಅಲ್ಲ. ಕೊಲೆ ಮಾಡಿದರಲ್ಲಾ ಅವರು arrest ಆದರು, ಅಮೇಲೆ ಬಿಡುಗಡೆಯಾಯಿತು.

ಶ್ರೀ ಕೆ.ಎಸ್. ಈಶ್ವರಪ್ಪ :- ವ್ಯಕ್ತಿ ಎಂದು ಹೇಳಿದಿರಿ. ತಾವು ಕುಳಿತುಕೊಳ್ಳಿ, ತಾವು ವಕೀಲರು, ನಾನು ವಕೀಲ ಅಲ್ಲ. ಈಗ ಆರ್.ಎಸ್.ಎಸ್. ಬಗ್ಗೆ, ಗೋಲ್ವಲ್ಕರ್ ಬಗ್ಗೆ, ಹಿಂದಿನ ಸರ್ಕಾರ ಕೇಸ್ ಹಾಕಿತ್ತು. ಈ ಕೇಸ್ ಹಾಕಿದಂಥ ಸಂದರ್ಭದಲ್ಲಿ ಕೋರ್ಟ್‌ನಲ್ಲಿ ಆರ್.ಎಸ್:ಎಸ್ ಅಗಲಿ, ಗೋಲ್ವಲ್ಕರ್ ಅಗಲಿ, ಗಾಂಧೀಜಿಯವರ ಕೊಲೆಗೆ ಸಂಬಂಧವಿಲ್ಲವೆಂದು ಜಡ್ಜ್‌ಮೆಂಟ್ ಕೊಟ್ಟಿದೆ. ತಾವು ವಿರೋಧಪಕ್ಷದ ನಾಯಕರಾಗಿ ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಇತಾರ ಬಗ್ಗೆ ಮಾತನಾಡುತ್ತಿದ್ದೀರಿ. ಇಡೀ ದೇಶದಲ್ಲಿ ನಾವೆಲ್ಲರೂ ಕೂಡ ಗೋಲ್ವಲ್ಕರ್‌ರವರ ಹಿಂಬಾಲಕರು, ನಾವೆಲ್ಲರೂ ಕೂಡ ಆರ್.ಎಸ್.ಎಸ್. ಮುಖಾಂತರ ಬಂದಿರುವವರು. ನಾವೆಲ್ಲರೂ ದೇಶಭಕ್ತಿಯನ್ನು ನಿರ್ಮಾಣ ಮಾಡಿದಂಥ ಸಂಸ್ಥೆಯಲ್ಲಿದ್ದೇವೆಂಬ ಹೆಮ್ಮೆ

ಅನಂದ ನಮಗಿದೆ. ತಾವು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಯಾರ ಬಗ್ಗೆ ಮಾತನಾಡುತ್ತಿದ್ದೀರೆಂಬುದನ್ನು ನೋಡಬೇಕು. ಅದರ ಜೊತೆಗೆ ಗೋಲ್ವಲ್ಕರ್ ಬಗ್ಗೆ, ಆರ್.ಎಸ್.ಎಸ್. ಬಗ್ಗೆ ಮಾನ್ಯ ಜವಹರಲಾಲ್ ನೆಹರುರವರು ಒಂದು ಆಯೋಗವನ್ನು ನೇಮಕ ಮಾಡಿದರು. ಆ ಆಯೋಗ ಕೂಡ ಆರ್.ಎಸ್.ಎಸ್.ಗೂ, ಗೋಲ್ವಲ್ಕರ್‌ಗೂ, ಗಾಂಧೀಜಿಯವರ ಕೊಲೆಗೂ ಸಂಬಂಧವಿಲ್ಲವೆಂದು ತೀರ್ಮಾನ ಕೊಟ್ಟಿದೆ. ತಾವು ಹಿರಿಯ ಸದಸ್ಯರಿದ್ದೀರಿ, ತಾವು ಮಾತನಾಡುವಂಥ ಸಂದರ್ಭದಲ್ಲಿ ಈಗಾಗಲೇ ಈ ಸದನ ಮತ್ತು ಮಾನ್ಯ ಸಭಾಧ್ಯಕ್ಷರು ಕೂಡ ನಿಮಗೆ ಎಚ್ಚರಿಕೆಯನ್ನು ಕೊಟ್ಟರು.

ಇಡೀ ಕರ್ನಾಟಕ ರಾಜ್ಯದ ಜನ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಆರ್.ಎಸ್.ಎಸ್.ನಿಂದ ಆಯ್ಕೆಯಾದವರಿಗೆ ಅಂದರೆ ಭಾರತೀಯ ಜನತಾ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದಾರೆ, ಅಧಿಕಾರಕ್ಕೆ ಬೆಂಬಲ ಕೊಟ್ಟಿದ್ದಾರೆ, ನಾವು ಅಧಿಕಾರಕ್ಕೆ ಬಂದಿರುವಂಥ ಸಂದರ್ಭದಲ್ಲಿ ಮತ್ತೆ ಆ ಸಂಸ್ಥೆಗೆ, ಆ ಸಂಸ್ಥೆಯಿಂದ ಪ್ರೇರಣೆ ಪಡೆದಂಥ ಕಾರ್ಯಕರ್ತರಿಗೆ, ಸ್ವಯಂಸೇವಕರಿಗೆ ನೀವು ನೋವು ಉಂಟು ಮಾಡುವಂಥ ಮಾತನ್ನಾಡಿದರೆ ರಾಜ್ಯದಲ್ಲಿ ಕಾಂಗ್ರೆಸ್ ಮತ್ತೂ ನಿರ್ನಾಮವಾಗುತ್ತದೆ, ಹೆಸರೂ ಉಳಿಯುವುದಿಲ್ಲ. ಅದಕ್ಕಾಗಿ ನಾನು ಹೇಳುವುದು ಇಷ್ಟೇ . . . . .

(ಗೊಂದಲ)

ಶ್ರೀ ರಾಮಚಂದ್ರಗೌಡ :- ನಾವೆಲ್ಲರೂ ಆರ್.ಎಸ್.ಎಸ್.ನವರೇ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಮಾತನಾಡುವುದಕ್ಕೆ ನಿಮಗೆ ಸ್ವಾತಂತ್ರ ಇದೆ. ಆದರೆ ನೀವು ಆ ಸ್ವಾತಂತ್ರವನ್ನು ದುರುಪಯೋಗ ಮಾಡಿಕೊಂಡು ಎಲ್ಲರನ್ನೂ ಕೆರಳಿಸಬೇಡಿ. ನೀವು ಬಾಯಿಗೆ ಬಂದ ಹಾಗೆ ಮಾತನಾಡಿದರೆ, ನಮಗೂ ಇಲ್ಲಿ ಶಕ್ತಿ ಇದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ನಾನು ಆರ್.ಎಸ್.ಎಸ್.ಬಗ್ಗೆ ಮಾತನಾಡುತ್ತಿಲ್ಲ. ಏಕೆ ನೀವು ಏಳುತ್ತೀರಿ? ಸ್ವಲ್ಪ ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ :- ನನ್ನ ಮಾತನ್ನು ಸ್ವಲ್ಪ ಕೇಳಿ. ಈ ರಾಜ್ಯದ ಜನ ನಮಗೆ, ನೀವು ಆಡಳಿತ ಮಾಡಿ ಎಂದು ಹೇಳಿ ನಮಗೆ ಆಡಳಿತ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ವಿಚಾರಕ್ಕೆ ಬೆಂಬಲ ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ನನ್ನ ಮಾತನ್ನು ಕೇಳಿ ಸ್ವಾಮಿ, ನೀವು ಒಪ್ಪಿಕೊಳ್ಳುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ :- ನಮ್ಮ ನಾಯಕತ್ವಕ್ಕೆ ಬೆಂಬಲ ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ನಮ್ಮ ಶಾಸಕರನ್ನು ಕೆರಳಿಸುವಂಥ ಮಾತುಗಳನ್ನು ದಯವಿಟ್ಟು ಆಡಬೇಡಿ.

(ಗೊಂದಲ)

ಶ್ರೀ ರಾಮಚಂದ್ರಗೌಡ :- Shut up, I say.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- . . . . ಮತ್ತೂ ಕಾಂಗ್ರೆಸ್ಸಿನ ವಿರುದ್ಧ ತಿರುಗಿ ಬೀಳಬೇಕಾಗುತ್ತದೆ. ಲೋಕಸಭಾ ಚುನಾವಣೆ ಬರುತ್ತಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಬರಲಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಲೋಕಸಭಾ ಚುನಾವಣೆಯಲ್ಲಿ, . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಅದೆಲ್ಲ ಬೇಡ ಸ್ವಾಮಿ, ಲೋಕಸಭಾ ಚುನಾವಣೆ ಇನ್ನೂ ಆರು ತಿಂಗಳಿದೆ, ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ :- ಮೊನ್ನೆ ನಡೆದ ಚುನಾವಣೆಯಲ್ಲಿ 8 ಸೀಟಿಗೆ ನೀವು ನಿಂತಿರಬೇಕಾದರೆ, ನಿಮ್ಮ ಫಲಿತಾಂಶ zero.

ಶ್ರೀ ಟಿ.ಬಿ. ಜಯಚಂದ್ರ :- ಆಯಿತು ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಲೋಕಸಭೆಯಲ್ಲಿ ಮತ್ತೂ zero ಆಗುತ್ತೀರಿ. ಹಾಗಾಗಿ, ಆರ್.ಎಸ್.ಎಸ್. ಬಗ್ಗೆ ಚಕಾರ ಎತ್ತಿದರೆ, ಗೋಲ್ವಲ್ಕರ್ ಬಗ್ಗೆ ಮಾತನಾಡಲು

ನಿಮಗೆ ಹಕ್ಕೂ ಇಲ್ಲ. ಗೋಲ್ವಲ್ಕರ್ ಬಗ್ಗೆ, ಆರ್.ಎಸ್.ಎಸ್. ಬಗ್ಗೆ, ವಿವೇಕಾನಂದರ ಬಗ್ಗೆ ಕಾಂಗ್ರೆಸ್ಸಿನವರಿಗೆ ಮಾತನಾಡುವಂಥ ಯೋಗ್ಯತೆಯೂ ಇಲ್ಲ, ಹಕ್ಕೂ ಇಲ್ಲ. ಅದಕ್ಕಾಗಿ ನಾನು ಪ್ರಾರ್ಥನೆ ಮಾಡುತ್ತೇನೆ . . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ವಿವೇಕಾನಂದರು ನಿಮ್ಮ ಆಸ್ತಿ ಅಲ್ಲ. ಸ್ವಲ್ಪ ಕೇಳಿ ಸ್ವಾಮಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :- ವಿವೇಕಾನಂದರು ಇಡೀ ಸಮಾಜದ ಆಸ್ತಿ, ಇಡೀ ದೇಶದ ಆಸ್ತಿ.

ಶ್ರೀ ಟಿ.ಬಿ. ಜಯಚಂದ್ರ :- ಇಡೀ ದೇಶಕ್ಕೆ ಮಾತ್ರವಲ್ಲ, ಇಡೀ ಪ್ರಪಂಚದ ಆಸ್ತಿ. ಪ್ರಪಂಚದ ಆಸ್ತಿ ಅವರು.

ಶ್ರೀ ಕೆ.ಎಸ್. ಈಶ್ವರಪ್ಪ :- ಅದಕ್ಕೋಸ್ಕರ ವಿದ್ಯಾರ್ಥಿಗಳಲ್ಲಿ ಜಾಗೃತಿ ಬರಿಸಲಿಕ್ಕೆ ಪ್ರಯತ್ನಿಸುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ :- ಈ ದೇಶಕ್ಕೇನಾದರೂ ಘನತೆ, ಗೌರವ ಇದ್ದಿದ್ದರೆ, ಅದು ವಿವೇಕಾನಂದರಿಂದ ಇದೆ.

(ಗೊಂದಲ)

ನಾನು ಏನಾದರೂ ವಿಚಾರಗಳನ್ನು ಮರೆತಿದ್ದರೆ, ಈಶ್ವರಪ್ಪನವರು ಆ ವಿಚಾರಗಳನ್ನು ಎತ್ತಿಬಿಡುತ್ತಾರೆ. ಸ್ವಾತಂತ್ರ್ಯ ಹೋರಾಟ ಮಾಡುವಂಥ ಸಂದರ್ಭದಲ್ಲಿ, ಈ ದೇಶಕ್ಕೆ ಸ್ವಾತಂತ್ರ್ಯ ಬಂತು ಸ್ವಾಮಿ, ಆ ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ಆರ್.ಎಸ್.ಎಸ್., ವಿ.ಹೆಚ್.ಪಿ. ಇವರ್ಯಾರೂ ಕೂಡ ಭಾಗವಹಿಸಿಲ್ಲ. ಯಾರಾದರೂ ಒಬ್ಬರು ಭಾವಹಿಸಿದ್ದನ್ನು ಹೇಳಿ ಸ್ವಾಮಿ. ಯಾರೂ ಭಾಗವಹಿಸಿಲ್ಲ. ಅದು ಕಾಂಗ್ರೆಸ್ಸಿನ ಸಾಧನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಇವತ್ತು ದೇಶಕ್ಕೆ ಸ್ವಾತಂತ್ರ್ಯ ಕಾಂಗ್ರೆಸ್ಸಿನಿಂದ ಬಂದಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ನಿಮ್ಮದು ನಿನ್ನೆ ಮೊನ್ನೆಯ ಕಾಂಗ್ರೆಸ್. ಆರ್.ಎಸ್.ಎಸ್.ನ ಸಂಸ್ಥಾಪಕರಾದ ಡಾ॥ ಕೇಶವ ಬಲರಾಮ ಅಡಿಗಾರವರು ಕಾಂಗ್ರೆಸ್ ಮುಖಾಂತರವೇ ನಾಯಕರಾಗಿದ್ದು, ಇದು ನಿಮಗೆ ಗೊತ್ತಿರಲಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಮಹಾತ್ಮ ಗಾಂಧಿಗೂ ಈಗಿನ ಕಾಂಗ್ರೆಸ್ಸಿಗೂ ಏನು ಸಂಬಂಧ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ವಿಷಯ ಏನೂ ಗೊತ್ತಿಲ್ಲದೇ ಏನೇನೋ ಮಾತನಾಡುತ್ತೀರಿ.

ಶ್ರೀ ಟಿ.ಬಿ. ಜಯಚಂದ್ರ :- ಈಶ್ವರಪ್ಪನವರೇ ನಾನು ನಿಮ್ಮನ್ನು ಒಂದು ಕೇಳುತ್ತೇನೆ, ಕಾಂಗ್ರೆಸ್ಸಿನ ಬಾವುಟವನ್ನು ನೀವು ನೋಡಿದ್ದೀರಾ? ಈ ದೇಶದ ಬಾವುಟವನ್ನು ನೋಡಿದ್ದೀರಾ? ಏಕೆ ಆ similarity? It is because of the Congress party.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಸ್ವಾತಂತ್ರ್ಯ ಹೋರಾಟದಲ್ಲಿ ನೀವು ಯಾರೂ ಭಾಗವಹಿಸಿರಲಿಲ್ಲ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ :- ಕಾಂಗ್ರೆಸ್ monopoly ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಇವತ್ತು ನೀವು ರಾಮನಿಗೆ ಬಿ.ಜೆ.ಪಿ. ಪಟ್ಟ ಕಟ್ಟಿ ಆಯಿತು. ಗೋಲ್ವಲ್ಕರ್‌ರವರಿಗೆ ಇವತ್ತಿನಿಂದ ಪಟ್ಟ ಕಟ್ಟಿ ಆಯಿತು. ವಿವೇಕಾನಂದರಿಗೂ ಬಿ.ಜೆ.ಪಿ. ಪಟ್ಟ ಕಟ್ಟುತ್ತಿದ್ದೀರಾ? ಏಕೆ ಇಂಥ ಕೆಲಸ ಮಾಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲ ಸದಸ್ಯರು ತಮ್ಮತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ :- ಕಾಂಗ್ರೆಸ್ ಧೂಳೀಪಟವಾಗಿದೆ.

(ಗೊಂದಲ)

ಅಧ್ಯಕ್ಷರು :- ರಾಮಚಂದ್ರಗೌಡರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಅಶೋಕ್ :- ಸುಪ್ರೀಂ ಕೋರ್ಟ್ ಆದೇಶವಿದ್ದರೂ ನೀವು ಅಪ್ಜಲ್‌ಗುರುವನ್ನು ಗಲ್ಲಿಗೇರಿಸಲಿಲ್ಲ. ಏಕೆ? ಓಟಿಗಾಗಿ ಹಾಗೆ ಮಾಡಿದಿರಿ. xxx xxx xxx

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :- ನಾನೂ ಸಹ ವಿವೇಕಾನಂದರ ಭಕ್ತ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ. ನೋಡಿ ಜಯಚಂದ್ರರವರೇ, ಈ ರೀತಿ ಪರಸ್ಪರ ನೀವು ಎಲ್ಲ ಸದಸ್ಯರು ಚರ್ಚೆ ಮಾಡುವುದರಿಂದ ಸದನಕ್ಕೆ ಯಾವುದೇ ಗೌರವ ಬರುವುದಿಲ್ಲ. ನಾನು ನಿನ್ನೆಯಿಂದಲೂ ಹೇಳುತ್ತಿದ್ದೇನೆ. ನಾನು ನಿಮಗೆ ಚರ್ಚೆ ಮಾಡಲು ಅವಕಾಶ ಕೊಟ್ಟೆ. ಕಾನೂನು ಸುವ್ಯವಸ್ಥೆ ಹೋಗಿ ಅಸ್ತವ್ಯಸ್ಥ ವಾಗುತ್ತಿದೆ. ನೀವು ಯಾವ ವಿಷಯವನ್ನು ಪ್ರಸ್ತಾಪ ಮಾಡಬೇಕು, ಯಾವುದಕ್ಕೆ ಮಹತ್ವ ಕೊಡಬೇಕು ಅದನ್ನು ಬಿಟ್ಟು ಯಾವುದೋ ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ.

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಜಯಚಂದ್ರರವರೇ, ನೀವು ಈಗಾಗಲೇ ಯಾವ ವಿಷಯವನ್ನು ಪ್ರಸ್ತಾಪ ಮಾಡಿದಿರಿ, ಅದು ಈಗಾಗಲೇ ಕೋರ್ಟಿನಲ್ಲಿ ತೀರ್ಮಾನವಾದಂಥ ವಿಷಯ. ಕೋರ್ಟಿನಲ್ಲಿ ತೀರ್ಮಾನವಾಗಿ ಹೋದಂಥ ವಿಷಯದ ಬಗ್ಗೆ ಪದೇ ಪದೇ, ಯಾವುದೇ ಒಂದು ರೀತಿಯಲ್ಲಿ ಪ್ರಚೋದನೆ ಕೊಡುವಂಥ ರೀತಿಯಲ್ಲಿ ಪ್ರಸ್ತಾಪ ಮಾಡುವಂಥಾದ್ದು ಸರಿಯಲ್ಲ. ಆ ಒಂದು ಶಬ್ದಗಳನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಪದೇ ಪದೇ ಈ ರೀತಿ, ಮುಕ್ತಾಯವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು ಸರಿಯಲ್ಲ. ಕಳೆದ 8 ತಿಂಗಳ ಅವಧಿಯಲ್ಲಿ ಏನು ನಡೆಯಿತು ಎನ್ನುವ ಬಗ್ಗೆ ನೀವು ಇಲ್ಲಿ ಸೂಚನೆ ಕೊಟ್ಟಿದ್ದೀರಿ. ಅದನ್ನು ಬಿಟ್ಟು ಬೇರೆ ಬೇರೆ ವಿಷಯಗಳನ್ನು ಏಕೆ ಮಾತನಾಡಬೇಕು? ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ? ಕಳೆದ 8 ತಿಂಗಳ ಅವಧಿಯಲ್ಲಿ ನಡೆದಂಥ ಘಟನೆ ಬಗ್ಗೆ ಎಂದು ಇದೆ. ಅವುಗಳನ್ನೆಲ್ಲ ಬಿಡುತ್ತೀರಿ. ಬೇರೆ ವಿಷಯಗಳ ಬಗ್ಗೆ ಮಾತನಾಡುತ್ತೀರಿ. ನಿಮಗೆ ನಿಜವಾಗಿಯೂ ಚರ್ಚೆ ಮಾಡುವಂಥ ಉದ್ದೇಶವಿದ್ದರೆ ಅದನ್ನು ಮಾತನಾಡಿ. ಅದನ್ನು ಬಿಟ್ಟು ಸದನ ಸಂಘರ್ಷದ ರೂಪದಲ್ಲಿ ನಡೆಯಬೇಕೆಂದರೆ ಮತ್ತೆ ಅದೇ ಸಂಘರ್ಷವಾಗುತ್ತದೆ. ಒಂದು ಸಲ ವೆಲ್‌ಗೆ ಬರುವುದು, ಇನ್ನೊಂದು ಸಲ ದಂಡಿ ಸತ್ಯಾಗ್ರಹ, ಈ ರೀತಿಯಾದರೆ ಯಾವುದೇ ವಿಷಯ ಚರ್ಚೆಯಾಗುವುದಿಲ್ಲ. ಇವತ್ತು ಇಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಅದರ ಬಗ್ಗೆ ನೀವು ಮಾತನಾಡುವುದಾದರೆ ಮಾತನಾಡಿ. ಇಲ್ಲದಿದ್ದರೆ ಈ ವಿಷಯವನ್ನು ನಾನು ಇಲ್ಲಿಗೆ close ಮಾಡುತ್ತೇನೆ.

(ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಿದ್ದಂಥ ಸಮಯದಲ್ಲಿ ವಿರೋಧ ಪಕ್ಷದ ಅನೇಕ ಸದಸ್ಯರು ಒಟ್ಟಿಗೇ ಮಾತನಾಡುತ್ತಿದ್ದುದು ಗೊಂದಲಮಯವಾಗಿತ್ತು)

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಸಭಾಧ್ಯಕ್ಷರೆ, ನೀವು ಮಾತನಾಡಬೇಕಾದರೆ ಬೇರೆಯವರು ಮಾತನಾಡಬಾರದು ಎನ್ನುವ ವಿವೇಚನೆಯಾದರೂ ಅವರಿಗೆ ಇರಬೇಕು. ನೀವು ಮಾತನಾಡುವಾಗ ಅವರು ಮಾತನಾಡಬಾರದು. ಅವರಿಗೆ ಆ ವಿವೇಚನೆಯಾದರೂ ಇರಬೇಕು. You are a senior leader. ನಿಮಗಾದರೂ ವಿವೇಚನೆ ಇರಲಿ.

(ಗೊಂದಲ)

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ವಿವೇಚನೆ ಯಾವತ್ತೂ ಇದೆ ಅವರಿಗೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಸಭಾಧ್ಯಕ್ಷರೇ, ಈಗ ಒಂದು ತೀರ್ಮಾನ ಆಗಬೇಕು. ನಾನು ಆತ್ಮೀಯತೆಯಿಂದ ಒಂದು ಮಾತನ್ನು ಹೇಳುತ್ತೇನೆ. ಈ ಅಧಿವೇಶನದಲ್ಲಿ ಚರ್ಚೆ ಮಾಡಬೇಕಾಗಿರುವಂಥ ಬಹಳಷ್ಟು ವಿಷಯಗಳಿವೆ. ಈ ಅಧಿವೇಶನ ಕೇವಲ 10 ದಿವಸ ನಡೆಯುತ್ತಿದೆ. ಕೇವಲ 10 ದಿವಸ ಎಲ್ಲಿ ಸಾಲುತ್ತದೆ, ಇನ್ನೂ ಹೆಚ್ಚು ದಿವಸ ಬೇಕು ಎಂದೆಲ್ಲ ನೀವು ಚರ್ಚೆ ಮಾಡುತ್ತಿದ್ದೀರಿ. ಅನಿವಾರ್ಯ ಕಾರಣಗಳಿಗಾಗಿ 10 ದಿವಸಗಳಲ್ಲಿ ಮುಗಿಸಬೇಕು ಎಂದು ತೀರ್ಮಾನವಾಗಿದೆ. ನಿಮ್ಮಲ್ಲಿ ಸರ್ಕಾರದ ವಿರುದ್ಧ ಪ್ರಸ್ತಾಪ ಮಾಡುವುದಕ್ಕೆ ಯಾವುದೇ subjects ಇಲ್ಲ. ಹಾಗೇನಾದರೂ ಇದ್ದರೆ, ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ಚರ್ಚೆ ಮಾಡಿ. ದೇಶ ಭಕ್ತರ್ಯಾರು, ದೇಶ ದ್ರೋಹಿಗಳ್ಯಾರು, ಭಯೋತ್ಪಾದನೆ ಬಗ್ಗೆ ಏನು ಮಾಡಬೇಕು, ಏನು ಮಾಡಬಾರದು ಎನ್ನುವ ಬಗ್ಗೆ ಒಂದು ಚರ್ಚೆಗೆ ದಯಮಾಡಿ ಅವಕಾಶ ಕೊಡಿ. ಸ್ವಾಮಿ ವಿವೇಕಾನಂದರು ಯಾರ ಸೊತ್ತು? ನೀವು ಹೇಳಿದಿರಿ Sir, ಅವರು ಇಡೀ ದೇಶದ ಸೊತ್ತು. ಯುವ ಪೀಳಿಗೆ ಅವರಿಂದ ಪ್ರೇರಣೆ ಪಡೆದು ಮುಂದೆ ಹೋಗುತ್ತಿರುವಂಥ ಕಾಲವಿದು. ಅಂಥ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು "ಯುವದಿನ" ಎಂದು ನಾವು ರಾಜ್ಯದಲ್ಲಿ ಆಚರಿಸುತ್ತಿದ್ದೇವೆ. ವಿಷಯ ಏನೆಂದರೆ, ಭಯೋತ್ಪಾದನೆ ಬಗ್ಗೆ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ, ಶಾಲಾ ಕಾಲೇಜುಗಳಲ್ಲಿ ಎಲ್ಲರನ್ನೂ involve ಮಾಡಿ ಸರ್ಕಾರವೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಭಯೋತ್ಪಾದನೆ ವಿರುದ್ಧ ಯುವ ಪೀಳಿಗೆಯಲ್ಲಿ ಜಾಗೃತಿ ಮೂಡಿಸಬೇಕು ಎನ್ನುವಂಥ ಒಂದು ಕಾರ್ಯಕ್ರಮವನ್ನು ಆಂದೋಲನದ ರೂಪದಲ್ಲಿ ತೆಗೆದುಕೊಂಡಿದ್ದೇವೆ. ಅದು ಬಿ.ಜೆ.ಪಿ. ಕಾರ್ಯಕ್ರಮವಲ್ಲ. ಅದು ಸರ್ಕಾರದ ಕಾರ್ಯಕ್ರಮ. ಅದರಲ್ಲಿ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಎಲ್ಲರೂ ಇದ್ದಾರೆ, ಎಲ್ಲ ಮಕ್ಕಳೂ ಇದ್ದಾರೆ. ನನ್ನ ಅಪೇಕ್ಷೆ ಎಂದರೆ, ಈ ಕಾರ್ಯಕ್ರಮದಲ್ಲಿ ಪ್ರತಿವರ್ಷ ನೀವೆಲ್ಲರೂ ಭಾಗವಹಿಸಬೇಕು. ಆ ಸಮಾರಂಭದಲ್ಲೇನಾದರೂ ನಾವು ರಾಜಕೀಯ ಬೇಳೆ ಬೇಯಿಸಿಕೊಳ್ಳುವಂಥ ಪ್ರಯತ್ನ ಮಾಡಿದರೆ, ನಮ್ಮದೇನಾದರೂ agendaವನ್ನು ಅಲ್ಲಿ ತರಲಿಕ್ಕೆ ಪ್ರಯತ್ನ ಮಾಡಿದರೆ ಅದು ಅಕ್ಷಮ್ಯ ಅಪರಾಧ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯುವಕರಲ್ಲಿ

ದೇಶಭಕ್ತಿಯನ್ನು ಮೂಡಿಸಿ, ಇವತ್ತು ಇಡೀ ಜಗತ್ತನ್ನು ಕಾಡುತ್ತಿರುವಂಥ ಭಯೋತ್ಪಾದನೆ ಬಗ್ಗೆ ಜಾಗೃತಿ ಮೂಡಿಸುವಂಥ ಕಾರ್ಯಕ್ರಮವದು. ಮೊದಲ ಬಾರಿಗೆ ಪ್ರಧಾನ ಮಂತ್ರಿಗಳೇ ನಮ್ಮೆಲ್ಲರ ಒತ್ತಾಯಕ್ಕೆ ಮಣಿದು ಮುಖ್ಯಮಂತ್ರಿಗಳ ಸಭೆಯನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಿದ್ದು, ಈ ವಿಷಯ ಅಲ್ಲಿ ಚರ್ಚೆಯಾಯಿತು. ಈ ದೇಶದ ಯುವ ಪೀಳಿಗೆ ಯಲ್ಲಿ ಒಂದು ಜಾಗೃತಿಯನ್ನು ಮೂಡಿಸಬೇಕು, ಭಯೋತ್ಪಾದನೆಯನ್ನು ಅಡಗಿಸುವುದಕ್ಕೆ ಖಾಕಿ ಬಟ್ಟೆ ಹಾಕಿರುವ ಪೊಲೀಸರು ಮಾತ್ರ ಸಾಲುವುದಿಲ್ಲ, ಸಮಾಜವೇ ಎದ್ದು ನಿಲ್ಲಬೇಕು ಎನ್ನುವ ಒಂದು ನಿರ್ಣಯ ಮಾಡಿ ಬಂದಿರುವಂಥ ಈ ಕಾಲದಲ್ಲಿ, ಈ ರಾಜ್ಯದ ಉದ್ದಗಲದಲ್ಲಿ ಇರುವ ಯುವಪೀಳಿಗೆ ಯಲ್ಲಿ ಜಾಗೃತಿಯನ್ನು ಮೂಡಿಸುತ್ತಿದ್ದೇವೆ. ನಮ್ಮ ಸರ್ಕಾರ ಇದನ್ನು ಮಾಡುತ್ತಿರುವುದನ್ನು ನೋಡಿ, ಬೇರೆ ಬೇರೆ ರಾಜ್ಯದವರು ಈ ರೀತಿ ಮಾಡಬೇಕು ಎಂದು ಹೇಳಿ, ಇದರಿಂದ ಯುವಕರು ಯಾವ ರೀತಿ ಜಾಗೃತರಾಗುತ್ತಿದ್ದಾರೆ ಎನ್ನುವ ವಿಷಯಗಳನ್ನು ತಿಳಿಯಲು ರಿಪೋರ್ಟ್‌ಗಳನ್ನು ತರಿಸಿಕೊಳ್ಳುತ್ತಿದ್ದಾರೆ.

ಬೇರೆ ರಾಜ್ಯಗಳಲ್ಲೂ ನಾವು ಮಾಡಿದ ರೀತಿಯಲ್ಲಿ ಜಾಗೃತಿ ಮೂಡಿಸುವಂಥ ಪ್ರಯತ್ನ ಮಾಡುತ್ತೇವೆ ಎಂದು ಯೋಚನೆ ಮಾಡುವಂಥ ಈ ಕಾಲದಲ್ಲಿ ಈಗಾಗಲೇ ಅದರ ಬಗ್ಗೆ ನಮ್ಮ ಸಚಿವ ಸಂಪುಟದ ಸದಸ್ಯರು ಚರ್ಚೆ ಮಾಡಿದ್ದೇವೆ. ಈಗ ಶಾಲಾಕಾಲೇಜುಗಳಲ್ಲಿ ಮಾಡುತ್ತಿದ್ದೇವೆ. ಮುಂದೆ ತಾಲ್ಲೂಕ ಮಟ್ಟದಲ್ಲಿ ಮಾಡುತ್ತಿದ್ದೇವೆ. ಎಲ್ಲಾ ಶಾಸಕರನ್ನೂ ಕರೆಯುತ್ತಿದ್ದೇವೆ. ಆ ವೇದಿಕೆಯನ್ನು ಉಪಯೋಗ ಮಾಡಿಕೊಂಡು ಜನರಲ್ಲಿ, ಯುವಕರಲ್ಲಿ ದೇಶಭಕ್ತಿಯನ್ನು ಮೂಡಿಸುವಂಥದ್ದು, ಭಯೋತ್ಪಾದನೆ ವಿರುದ್ಧ ಸಮರವನ್ನು ಸಾರುವಂಥದ್ದಕ್ಕೆ ಕರ್ನಾಟಕ ಮುಂಚೂಣಿಯಲ್ಲಿದೆ ಎನ್ನುವ ಸಂದೇಶವನ್ನು ದೇಶಕ್ಕೆ ಕೊಡಬೇಕಾಗಿದೆ, ಜಗತ್ತಿಗೇ ಕೊಡಬೇಕಾಗಿದೆ. ನೀವು appreciate ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಇಲ್ಲಿ ಗೋಲ್ವಾಂಕರ್, ಆರ್‌ಎಸ್‌ಎಸ್ ಬಿಟ್ಟು ಬೇರೆ ವಿಷಯ ಇಲ್ಲ. ಇದು ಇವತ್ತಲ್ಲ. ಸ್ವಾತಂತ್ರ್ಯ ಬಂದಂದಿನಿಂದ ಆರ್‌ಎಸ್‌ಎಸ್ ಗೋಲ್ವಾಂಕರ್ ಇದನ್ನೇ ನೀವು ಹೇಳುತ್ತಿದ್ದೀರಿ. ಅದನ್ನು ನಾವು ಬೇಡವೆಂತಲೂ ಹೇಳುವುದಿಲ್ಲ. ನೀವು ಹೇಳಿ, ಕೇಳಿ ಪರಿಣಾಮ ಏನಾಗಿದೆ ಎನ್ನುವುದನ್ನು ನಾನು ಹೇಳುವುದಿಲ್ಲ. ಕರ್ನಾಟಕದಲ್ಲಿ ನಾವು ಎಲ್ಲಿದ್ದೆವು ಸ್ವಾಮಿ? ನಮಗೆ address ಇರಲಿಲ್ಲ. You know well. ವಿಧಾನಮಂಡಲದಲ್ಲಿ ಇಬ್ಬರಲ್ಲಿ ನಾನು ಒಬ್ಬನೇ ಇದ್ದದ್ದು. ಇನ್ನೊಬ್ಬರು ಬಿಟ್ಟು ಹೋಗಿದ್ದರು. ಇವತ್ತು ನಾವು 115 ಜನ ಇದ್ದೇವೆ. ನಾನು ಏನು

ಹೇಳುತ್ತೇನೆಂದರೆ, ನನ್ನ ಬಗ್ಗೆ ಮಾತನಾಡಿದರೆ, ನಮ್ಮ ಪರಿವಾರದ ಬಗ್ಗೆ ಮಾತನಾಡಿದರೆ ಈ ನಾಡಿನ ಐದೂವರೆ ಕೋಟಿ ಜನರು ಕೊಟ್ಟ ತೀರ್ಪಿನ ವಿರುದ್ಧ, ಜನರ ವಿರುದ್ಧ ಮಾತನಾಡಿದ ಹಾಗೆ ಆಗುತ್ತದೆ. ದೇಶದ ಜನ ತೀರ್ಮಾನ ಮಾಡಲಿ.

ಉದಾಹರಣೆಗೆ, ಇನ್ನೆರಡು ತಿಂಗಳಲ್ಲಿ ಲೋಕಸಭಾ ಚುನಾವಣೆ ಬರುತ್ತಿದೆ. ಆ ಸಂದರ್ಭದಲ್ಲಿ ನಮ್ಮ ಕಾರ್ಯಕ್ರಮಗಳಿಗೆ, ನಮ್ಮ ವಿಚಾರಗಳಿಗೆ ಜನ ಮನ್ನಣೆ ಕೊಡುತ್ತಾರೋ ಅಥವಾ ನಿಮ್ಮ ವಿಚಾರಗಳಿಗೆ ಮನ್ನಣೆ ಕೊಡುತ್ತಾರೋ ಎಂದು ಜನತಾ ಜನಾರ್ದನನ ಮುಂದೆ ನಾವು ಹೋಗುತ್ತಿದ್ದೇವೆ. ಆದ್ದರಿಂದ, ಜಯಚಂದ್ರರವರೆ, ಈ ವೇದಿಕೆಯನ್ನು ಈ ನಾಡಿನ ಜನರ ಸಂಕಷ್ಟವನ್ನು ಬಗೆಹರಿಸಲಿಕ್ಕೆ, ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಳ್ಳುವುದಕ್ಕೆ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರೆ 1,2,3,4 ಎಂದು ಹೇಳಿ ನಾವು ತಿದ್ದಿಕೊಳ್ಳುವುದೇನಾದರೂ ಇದ್ದರೆ ಮಾರ್ಗದರ್ಶನ ಮಾಡಿ ನಾವು ತಲೆಬಾಗಿ ಸ್ವೀಕಾರ ಮಾಡುವುದಕ್ಕೆ ಸಿದ್ಧರಿದ್ದೇವೆ. ಇಲ್ಲದಿದ್ದರೇನಾಗುತ್ತದೆಂದರೆ, ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ, ಅಟಲ್‌ಬಿಹಾರಿ ವಾಜಪೇಯಿಯವರು ಆರ್‌ಎಸ್‌ಎಸ್ ಮೂಲದಿಂದ ಬಂದವರು. ಇವತ್ತು ಈ ನಾಡಿನ ಐದೂವರೆ ಕೋಟಿ ಜನ ನಮ್ಮ ವಿಚಾರಕ್ಕೆ ಮಣಿದು, ನಮಗೆ ಆಶೀರ್ವಾದ ಮಾಡಿದ್ದಾರೆ. ಈ ಯಡಿಯೂರಪ್ಪ ಆರ್‌ಎಸ್‌ಎಸ್ ಮೂಲದಿಂದ ಬಂದವನು ಎಂದು ಹೇಳಿದ್ದೇನೆ. ಇವತ್ತೇನಾದರೂ ನಾನು ಇಲ್ಲಿ ನಿಂತಿದ್ದರೆ ಅದಕ್ಕೆ ಕಾರಣ ಆರ್‌ಎಸ್‌ಎಸ್, ಸಂಘ ಪರಿವಾರ. ಅದನ್ನು ನೀವು ಒಪ್ಪಬಹುದು, ಒಪ್ಪದೇ ಇರಬಹುದು. ನಾನು ನಿಮಗೆ ಒಪ್ಪಿ ಎಂದು ಹೇಳುವುದಿಲ್ಲ. ಆದರೆ, ನಮ್ಮ ವಿಚಾರಕ್ಕೆ ಈ ರಾಜ್ಯದ ಜನ, ಈ ದೇಶದ ಜನ ಮನ್ನಣೆ ಕೊಟ್ಟು ಅಟಲ್‌ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನಿಯಾದರು. ನನ್ನಂಥ ಒಬ್ಬ ಸಾಮಾನ್ಯ ಕಾರ್ಯಕರ್ತ ಈ ರಾಜ್ಯದ ಮುಖ್ಯಮಂತ್ರಿಯಾಗಿ, ಜನಸೇವಕನಾಗಿ ಇಲ್ಲಿ ಕುಳಿತಿದ್ದೇನೆ. ಆದರೆ, ನಿಮ್ಮ ಪರಿಸ್ಥಿತಿ ಏನು? ಮೊನ್ನೆ ಆದಂಥ ಚುನಾವಣೆಯಲ್ಲಿ ಏಕೆ 10 ಸೀಟು ಕಳೆದುಕೊಂಡಿರಿ? ಇದನ್ನು ಸರಿಪಡಿಸುವುದಕ್ಕೆ ಚರ್ಚೆ ಮಾಡಿ. ಈಶ್ವರಪ್ಪನವರು ಹೇಳಿದ ಹಾಗೆ, ನಾನು ಅತ್ಯಂತ ವಿನಯದಿಂದ ಒಂದು ಮಾತು ಹೇಳುತ್ತೇನೆ, ಈ ರೀತಿ ಟೀಕೆ ಮಾಡುವುದರಿಂದ ಖಂಡಿತ ನೀವೆಲ್ಲರೂ ನಿಮ್ಮ ಪಕ್ಷ ಬಲಪಡಿಸುವುದಕ್ಕಾಗುವುದಿಲ್ಲ, ಜನರಿಗೆ ಇಲ್ಲಿಂದ ಒಳ್ಳೆಯ ಮೆಸೇಜ್ ಹೋಗುವುದಿಲ್ಲ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ, ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತಿದ್ದೇನೆ, ದಯಮಾಡಿ, ಕಾನೂನು ಸುವ್ಯವಸ್ಥೆಗೆ ಸೀಮಿತವಾಗಿ ಚರ್ಚೆ ಮಾಡಬೇಕು. ಇಲ್ಲವೆಂದರೆ, ಕೋಲಾಹಲದ ವಿಷಯ ಮಾತನಾಡಬೇಕು,

ಆರ್‌ಎಸ್‌ಎಸ್ ಬಗ್ಗೆ ವಿಚಾರ ಮಾಡಬೇಕೆಂದರೆ ಬನ್ನಿ, ಒಳಗಡೆ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತುಕೊಂಡು ಅದನ್ನೇ ಚರ್ಚೆಗೆ ಶುರು ಮಾಡೋಣ. We are ready. ಅಂಕಿ ಅಂಶಗಳ ಜೊತೆಗೆ ಚರ್ಚೆ ಮಾಡೋಣ. ದಯಮಾಡಿ, ಈ ತರಹ ಬೇರೆ ದಿಕ್ಕಿಗೆ ಬದಲಾಯಿಸುವುದನ್ನು ಪ್ರಯತ್ನ ಮಾಡುವುದರಿಂದ ನಿಮ್ಮಂಥವರು, ನಿಮ್ಮ ಬಗ್ಗೆ ನಾವೆಲ್ಲ ಬಹಳ ಗೌರವಎಟ್ಟುಕೊಂಡಿದ್ದೇವೆ, ಸರಿಯೋ, ತಪ್ಪೋ ಅಲ್ಲಿದ್ದೀರಿ, ಆದರೆ, ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡಿರಬೇಕಾದರೆ, ಅದನ್ನು ಕಳೆದುಕೊಳ್ಳುವಂಥ ಕೆಲಸ ಮಾಡಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಯು.ಟಿ. ಖಾದರ್ :- ಈ ವಿಷಯದ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೇನೆ. ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತರು. ಬಹುಶ: ಆ ಬುದ್ಧಿವಂತಿಕೆ, ಆ ಚಾಕಚಕ್ಯತೆ ಇಲ್ಲದಿದ್ದರೆ 20 ವರ್ಷಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿರಲಿಲ್ಲವೆನ್ನುವ ಮಾತನ್ನು ನಾನು ಆಗಲೇ ಹೇಳಿದ್ದೇನೆ. ಆದರೆ, ನೀವು ಎಷ್ಟರಮಟ್ಟಿಗೆ ಬುದ್ಧಿವಂತರು ಎನ್ನುವುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ನೀವು ಮುಂದಿನ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇವತ್ತು ಯಾವುದೋ ಒಂದು ರೀತಿಯಲ್ಲಿ ಕೇಸರೀಕರಣ ಮಾಡುವುದಕ್ಕೆ ಹೊರಟಿದ್ದೀರಿ. ಹೇಗೆ ಎಂದು ಹೇಳುತ್ತೇನೆ ಕೇಳಿ. ಹೇಗೆ ಎನ್ನುವುದನ್ನು ಚುನಾವಣೆ ತೀರ್ಮಾನ ಮಾಡುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :- ನಮ್ಮ ಪರವಾಗಿ ಚುನಾವಣಾ ಪ್ರಚಾರವನ್ನು ನೀವೇ ಮಾಡಿಬಿಡಿ.

(ಗೊಂದಲ)

ಶ್ರೀ ರಾಮಚಂದ್ರಗೌಡ (ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರು):- (ಗೊಂದಲ) ವಿವೇಕಾನಂದರು ಕೇಸರಿ ಹಾಕಿದ್ದು ತಪ್ಪೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವವನ್ನು ಯುವಕರ ದಿನಾಚರಣೆ ಎಂದು ಮಾಡುತ್ತೇವೆಂದು . . . .

(ಗೊಂದಲ)

ಶ್ರೀ ರಾಮಚಂದ್ರಗೌಡ :- ವಿವೇಕಾನಂದರು ಕೇಸರಿ ಹಾಕಿದ್ದು ತಪ್ಪೇ ಹೇಳಿ.

(ಗೊಂದಲ)

ಅಧ್ಯಕ್ಷರು :- ಪರಸ್ಪರ ನೀವೇ ಚರ್ಚೆ ಮಾಡುವುದು ಸರಿಯಲ್ಲ. ಜಯಚಂದ್ರರವರೆ, ಸಾಕಷ್ಟು ವಿಷಯಗಳನ್ನು ಹೇಳಿದ್ದೀರಿ. ಈಗ ಬೇರೆಯವರಿಗೆ ಅವಕಾಶ ಕೊಡುತ್ತೇನೆ. ತಾವು ಮಾತನಾಡಿ ಮುಗಿಸಿ. ಕಾನೂನು ಸುವ್ಯವಸ್ಥೆ ವಿಷಯ ಬಿಟ್ಟು ಬೇರೆ ವಿಷಯ ಚರ್ಚೆಯಾಗುತ್ತಿದೆ. ಕಾನೂನು ಸುವ್ಯವಸ್ಥೆ ಬಗ್ಗೆ ಚರ್ಚೆ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ :- ವಿವೇಕಾನಂದರ ಸಂದೇಶ ಯುವಕರಿಗೆ ಕೇವಲ ಭಯೋತ್ಪಾದನೆಗೆ ಸೀಮಿತವಲ್ಲ.

(ಗೊಂದಲ)

ಶ್ರೀ ನಿ.ಲ. ನರೇಂದ್ರಬಾಬು :- ಸಚಿವರುಗಳಿಗೆ ಸದನದಲ್ಲಿ ಹೇಗೆ ವರ್ತಿಸಬೇಕೆಂಬುದು ಗೊತ್ತಿಲ್ಲ.

(ಗೊಂದಲ)

ಶ್ರೀ ಯು.ಟಿ. ಖಾದರ್ :- ಅಧ್ಯಕ್ಷರೆ, ನಾನು ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಜನ ಜಾಗೃತಿ ಮೂಡಿಸುವಂಥ . . . .

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):- ವಿವೇಕಾನಂದರ ಹೆಸರನ್ನು ಬಳಸಿಕೊಂಡಿರುವುದರ ಬಗ್ಗೆ ತಮ್ಮಿಂದ ಆಕ್ಷೇಪ ಬರುತ್ತಿರುವುದು ನೋಡಿದರೆ, ನನಗೆ ಭಯ ಕಾಡುತ್ತಿದೆ. ಯಾವ ಕಾರಣಕ್ಕಾಗಿ ಈ ರೀತಿ ಮಾಡುತ್ತಿದ್ದಾರೋ ಗೊತ್ತಿಲ್ಲ. ಇಡೀ ದೇಶದಲ್ಲಿ ರಾಜೀವ್‌ಗಾಂಧಿ ಯುವಕ ಕೇಂದ್ರಗಳನ್ನು ಮಾಡಬೇಕೆನ್ನುವ ಸೂಚನೆ ಮಾಡಿದಾಗ ಯಾರಾದರೂ ಆಕ್ಷೇಪ ಮಾಡಿದ್ದಾರೆಯೇ? ನೀವು ಆಲೋಚನೆ ಮಾಡಿ. ಇವತ್ತು ನಾವೇನಾದರೂ ಪಕ್ಷದ ಒಬ್ಬ ನಾಯಕರ ಹೆಸರನ್ನೇನಾದರೂ ಈ ಕಾರ್ಯಕ್ರಮಕ್ಕೆ ಇಟ್ಟು ಇದನ್ನು ಮಾಡಲಿಕ್ಕೆ ಹೊರಟಿದ್ದೇವೆಯೇ? ಈ ಕಾರ್ಯಕ್ರಮವೇನೆಂದರೆ, ಜನರಲ್ಲಿ ಜಾಗೃತಿ ಮೂಡಿಸುವಂಥ, ದೇಶಾಭಿಮಾನ ಮೂಡಿಸುವಂಥ ಕಾರ್ಯಕ್ರಮಕ್ಕೆ ಇವತ್ತು

ಜಗತ್ತಿನಾದ್ಯಂತ ಬಂದಂಥ ಭಯೋತ್ಪಾದನೆಯನ್ನು ಯಾವ ರೀತಿಯಾಗಿ ತೊಡೆದುಹಾಕಬಹುದೆನ್ನುವುದನ್ನು ವಿದ್ಯಾರ್ಥಿಗಳು ಜನ ಜಾಗೃತಿ ಮೂಡಿಸುವಂಥ ಕಾರ್ಯಕ್ರಮ ನಡೆಯುತ್ತಿರಬೇಕಾದರೆ, ನಾವೇನಾದರೂ. . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ರಾಜೀವ್‌ಗಾಂಧಿ ಯುವಕ ಕೇಂದ್ರ ಸ್ಥಾಪಿಸಲು Government Order ಇದೆ. ಇದಕ್ಕೆ Government Order ಇದೆಯೇ? ಇದಕ್ಕೆ Government Order ಕೊಡಿ.

(ಗೊಂದಲ)

ಶ್ರೀ ಯು.ಟಿ. ಖಾದರ್ : ಈ ಒಂದು ಜನ ಜಾಗೃತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೇನೆ. (ಗೊಂದಲ) ಈ ಕಾರ್ಯಕ್ರಮ ಮಂಗಳೂರಿನಲ್ಲಿ ಉದ್ಘಾಟನೆಯಾದಾಗ (ಗೊಂದಲ) ನಾನು ಭಾಗವಹಿಸಿದ್ದೆ. ಸರ್ಕಾರ ಯಾವ ಉದ್ದೇಶಕ್ಕಾಗಿ ಇದನ್ನು ಆರಂಭ ಮಾಡಿದೆಯೋ ಅದನ್ನು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ, ಅದು ಯಾವ ರೀತಿಯಿಂದ implement ಆಗುತ್ತದೆಂಬುದನ್ನು ನಾವು ಆಲೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇನೋ ಎಂಬುದು ಗೊತ್ತಿಲ್ಲ. ಇವತ್ತು ಸರ್ಕಾರದ ಮುಖಾಂತರ ಕಾರ್ಯಕ್ರಮವನ್ನು ಹಮ್ಮಿಕೊಂಡಾಗ ಇದರ ಜವಾಬ್ದಾರಿಯನ್ನು ಯಾರು ವಹಿಸುತ್ತಾರೆ ಎಂದು ಗೊತ್ತಾಗಬೇಕು. ನಾನು ಡಿ.ಸಿ.ಯವರನ್ನು ಕೇಳಿದಾಗ, ಈ ವಿಚಾರ ಡಿ.ಸಿ.ಯವರಿಗೆ ಗೊತ್ತಿಲ್ಲ. ಮಾನ್ಯ Vice Chancellor ಹತ್ತಿರ ಮಾತನಾಡಿದಾಗ, ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆಂದು ಹೇಳಿದರು. ಅದರ ಜೊತೆಯಲ್ಲಿ, 4-5 ಜನರನ್ನು ಅಧಿಕೇರಾತೇರ ಸದಸ್ಯರನ್ನಾಗಿ ಮಾಡಿ ಸಂಪೂರ್ಣ ಜವಾಬ್ದಾರಿ ಕೊಟ್ಟಿದ್ದಾರೆ. ಬೇರೆ ಬೇರೆ ಸಂಘಟನೆಗೆ ಸೇರಿದ್ದ ಒಂದು. ಎರಡನೇಯದಾಗಿ ವಿದ್ಯಾರ್ಥಿಗಳು ಜಾಗೃತಿ ಮೂಡಿಸುವಾಗ ಉತ್ತಮವಾದ ಒಂದು ಸಮಾಜದ ಸಂದೇಶವನ್ನು ಕೊಡುವ ಜವಾಬ್ದಾರಿ ಇವತ್ತು ಸರ್ಕಾರದ ಮೇಲಿದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಅಂದಿನ ಕಾರ್ಯಕ್ರಮದಲ್ಲಿ ಯಾವುದೇ ಜಾತಿ ಮತ, ವರ್ಗದವರನ್ನು ಒಗ್ಗೂಡಿಸುವಂಥ ಯಾವುದೇ ಸಮಾರಂಭದಲ್ಲಿ ಇಲ್ಲ ಎನ್ನುವುದನ್ನು ಬಹಳ ಖೇದದಿಂದ ಹೇಳುತ್ತೇನೆ. ಸ್ವಾಮಿ ವಿವೇಕಾನಂದರವರ ರಾಮಕೃಷ್ಣ ಮಿಷನ್‌ನವರು ಅವರು 8 ದಿವಸ ಬಂದು ತಂಗಿದ್ದರು. ಅಲ್ಲಿಗೆ ನಾವು ಹೋಗಿದ್ದೆವು.

ಅಲ್ಲಿಯ ಸ್ವಾಮೀಜಿಯವರು ಒಂದು ಮಾತು ಹೇಳಿದರು. ಭಾರತವನ್ನು ಬಲಿಷ್ಠ ಮಾಡುವುದಕ್ಕೆ ಒಂದು Muslim body ಹಾಗೂ ಹಿಂದೂ ಮೈಂಡ್ ಬೇಕೆಂದು ಸ್ವಾಮಿ ವಿವೇಕಾನಂದರು ಹೇಳಿದರೆಂದು ನಮ್ಮ ಸ್ವಾಮೀಜಿಯವರು ಹೇಳಿದ್ದರು. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಅರ್ಥಮಾಡಿಕೊಳ್ಳಬೇಕು. ಇವತ್ತು ಭಾರತ ದೇಶವನ್ನು ಬಲಿಷ್ಠ ಮಾಡಲಿಕ್ಕೆ ಒಂದು Muslim body ಹಾಗೂ ಹಿಂದೂ ಮೈಂಡ್ ಮತ್ತು ಕ್ರಿಶ್ಚಿಯನ್ ಹೃದಯ ಬೇಕೆಂದು ನಾವು ಅರ್ಥ ಮಾಡಿಕೊಂಡು, ಒಂದು ಸಮಿತಿಯನ್ನು ರಚಿಸಿ ....

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಇವತ್ತಿನ ವಿವೇಕಾನಂದ ಜಯಂತಿ ಸಂದರ್ಭದಲ್ಲಿ ಸರ್ಕಾರದಿಂದ ಏನು ಕಾರ್ಯಕ್ರಮವನ್ನು ಏನು ಮಾಡುತ್ತಿದ್ದಾರೆನ್ನುವ ಬಗ್ಗೆ ಭಯೋತ್ಪಾದನೆಯನ್ನು ಉಳಿಸತಕ್ಕಂಥದ್ದಕ್ಕೋ, ಅಳಿಸತಕ್ಕಂಥದ್ದಕ್ಕೋ ಆಮೇಲೆ ಚರ್ಚೆ ಮಾಡೋಣ. ಅದರ ಬಗ್ಗೆ ನಾನು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಈಶ್ವರಪ್ಪನವರು ಮಾತನಾಡಿ, ಭಯೋತ್ಪಾದನೆಯನ್ನು ನಿಲ್ಲಿಸುವುದಕ್ಕೆ ಜನ ಜಾಗೃತಿ ಮೂಡಿಸಲಿಕ್ಕೆ ಯುವಕರನ್ನು ಜಾಗೃತಿಗೊಳಿಸೋಣವೆಂದು ಹೇಳಿದರು. ವಿವೇಕಾನಂದರು, ನೂರು ಜನ ಬಿಸಿರಕ್ತದ ಯುವಕರು ನನ್ನ ಜೊತೆ ಬಂದರೆ ದೇಶ ಕಟ್ಟುತ್ತೇನೆ ಎನ್ನುವ ಸಂದೇಶವನ್ನು ಭಾರತಕ್ಕೆ ಕೊಟ್ಟಿದ್ದಾರೆನ್ನುವ ಮಾತನ್ನು ಹೇಳುತ್ತಾ, ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದಕ್ಕೆ ನೀವು ಹೊರಟಿದ್ದೀರಿ ಸಂತೋಷ. ಈ ಕಾರ್ಯಕ್ರಮದ ಬಗ್ಗೆ ನಾನು ಮೆಚ್ಚಿಕೊಳ್ಳುತ್ತೇನೆ. ಆದರೆ, ಇತ್ತೀಚೆಗೆ, ಒಂದು ವಾರ, ಹದಿನೈದು ದಿವಸಗಳ ಹಿಂದೆ ಹುಬ್ಬಳ್ಳಿ ಘಟನೆಗಳು ಚುನಾವಣಾ ಸಂದರ್ಭದಲ್ಲಿ ನಡೆದವಲ್ಲ, ಆ ಸಂದರ್ಭದಲ್ಲಿ ನಡೆದ ಹಿನ್ನೆಲೆ ಏನು ಎನ್ನುವ ಬಗ್ಗೆ ಇವರ ಹಿಂದಿನ co partners ಬಗ್ಗೆ ಪೋಲೀಸರು ರಾಜ್ಯದ ಜನತೆ ಮುಂದೆ ಮಾಹಿತಿ ಇಟ್ಟಿದ್ದಾರೆ.

ಈ co partners ವಿಷಯದಲ್ಲಿ ಈ ಕಾರ್ಯಕ್ರಮದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ? ಎಂಬ ಬಗ್ಗೆ ಸ್ಪಷ್ಟೀಕರಣ ಕೊಡುವುದು ಸೂಕ್ತ.

(ಗೊಂದಲ)

ಅಧ್ಯಕ್ಷರು :- ಅವರು ಮಾತನಾಡಿ ಮುಗಿಸಲಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾತನಾಡುವಾಗ ಏಕೆ ಅವರು interfere ಮಾಡುತ್ತಾರೆ?

ಅಧ್ಯಕ್ಷರು :- ಅವರು ಮಾತನಾಡಿ ಮುಗಿಸಿದ ಮೇಲೆ ನೀವೂ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು clarification ಕೇಳುತ್ತಿದ್ದೇನಷ್ಟೆ. ಈ ಒಂದು ಜಾಗೃತಿ ಮೂಡಿಸುತ್ತಿರುವಂಥದ್ದರಲ್ಲಿ ಕೇವಲ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರ ಬಗ್ಗೆ ಜಾಗೃತಿ ಮೂಡಿಸುತ್ತೀರೋ? ಇಲ್ಲವೆ, ಇನ್ನೂ ಬೇರೆ ಬೇರೆ ಸಂಘಟನೆಗಳು ಭಯೋತ್ಪಾದನೆ ಚಟುವಟಿಕೆ ನಡೆಸುತ್ತಿರುವುದರ ಬಗ್ಗೆ ಈಗ ಹೊಸ ಮಾಹಿತಿಗಳು ಏನು ಹೊರಗಡೆ ಬರುತ್ತಿವೆ, ಆ ರೀತಿಯ ಭಯೋತ್ಪಾದಕರ ವಿಷಯದಲ್ಲೂ ಜನರಲ್ಲಿ, ಯುವಕರಲ್ಲಿ ಜಾಗೃತಿ ಮೂಡಿಸುತ್ತೀರೋ ಹೇಗೆ? ಎಂದು clarification ಕೇಳುತ್ತಿದ್ದೇನೆ. ಮಾನ್ಯ ಉದಾಸಿಯವರು, ವಿವೇಕಾನಂದರನ್ನು ನಾವ್ಯಾರೂ ಗುತ್ತಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಎಲ್ಲರೂ ಅವರ ಹೆಸರನ್ನು ಉಪಯೋಗ ಮಾಡಿಕೊಳ್ಳಬಹುದು, ಮಾಡಿಕೊಳ್ಳುತ್ತಿದ್ದೇವೆಂದು ಹೇಳಿದರು. ಬಿಜೆಪಿ ಬೆಳೆದು ಬಂದಂಥ ದಾರಿ ನೋಡಿದಾಗ beginning ನಲ್ಲಿ ಪರಶುರಾಮನ ಸಂಕೇತ ಇಟ್ಟುಕೊಂಡರು, ನಂತರ ಅಧಿಕಾರ ಬರಲಿಕ್ಕೆ ರಾಮನ ಹೆಸರು ಇಟ್ಟುಕೊಂಡಿರಿ, ಈಗ ಹೊಸದಾಗಿ ವಿವೇಕಾನಂದರ ಹೆಸರನ್ನು ಇಟ್ಟುಕೊಳ್ಳಲಿಕ್ಕೆ ಹೊರಟಿದ್ದೀರಿ. ಸಂತೋಷ, ವಿವೇಕಾನಂದರ ಹೆಸರನ್ನೂ ಉಪಯೋಗ ಮಾಡಿಕೊಳ್ಳಿ. ಅದಕ್ಕೆ ನಮ್ಮದೇನೂ ಯಾವುದೇ ತಕರಾರು ಇಲ್ಲ. ಆದರೆ, ಕರ್ನಾಟಕದಲ್ಲಿ ಕಳೆದ 8 ತಿಂಗಳಲ್ಲಿ ನಡೆದ ಘಟನೆಗಳೇನಿವೆ, ಚರ್ಚ್‌ಗಳ ಮೇಲೆ ದಾಳಿ ಸಂದರ್ಭದಲ್ಲಿ ಯಾವ್ಯಾವ ರೀತಿ ನೀವು ಹೇಳಿಕೆಯನ್ನು ಕೊಡುತ್ತಾ ಬಂದಿರಿ ಇದೆಲ್ಲವನ್ನು ನೀವು ಚರ್ಚೆ ಮಾಡಲಿಕ್ಕೆ ಹೊರಟರೆ ಇವತ್ತು ನೀವು ಹಲವಾರು ರೀತಿಯ ವೈಫಲ್ಯಗಳನ್ನು ತೋರಿಸಿಕೊಂಡಿದ್ದೀರಿ. ಅದರ ಬಗ್ಗೆ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡುವಾಗ ಆ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ಆದರೆ, ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಈ ಅಧಿವೇಶನದಲ್ಲಿ ಹಲವಾರು ನಿರ್ಧಾರಗಳನ್ನು ಮಾಡಬಹುದೆನ್ನುವ ನಿರೀಕ್ಷೆಯನ್ನೇನು ಇಟ್ಟಿದ್ದಾರೆ,

ಮಾಧ್ಯಮಗಳಲ್ಲಿ ಹಲವಾರು ರೀತಿಯ ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಈ ಭಾಗದ ಹಿರಿಯ ನಾಗರೀಕರೇನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾವೇನು ಸಮಯವನ್ನು ಮೀಸಲಿಡಬೇಕಾಗಿದೆ, ದಯವಿಟ್ಟು ಈ ಒಂದು ಸದನದಲ್ಲಿ ಇನ್ನಿರುವ 4 ದಿವಸಗಳಲ್ಲಾದರೂ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುವ ವಿಷಯಗಳಿಗೆ ನಾವು ಸಮಯವನ್ನು ಮೀಸಲಿಡೋಣ.

ಅಧ್ಯಕ್ಷರು :- ಜಯಚಂದ್ರರವರೆ, ತಾವು conclude ಮಾಡುತ್ತೀರಾ? ನೀವು ಮಾತನಾಡಿ ಮುಗಿಯಿತೇ?

ಶ್ರೀ ಬಿ.ಸಿ. ಪಾಟೀಲ್ :- ಈಗ ತಾನೆ ಮುಖ್ಯಮಂತ್ರಿಗಳು ಮಾತನಾಡುತ್ತಾ ಒಂದು ವಿಷಯವನ್ನು ಪ್ರಸ್ತಾಪಿಸಿದರು. ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸುವಾಗ ಯುವಕರನ್ನು ಭಯೋತ್ಪಾದನೆಯ ವಿರುದ್ಧ ಹೋರಾಟ ಮಾಡಲಿಕ್ಕೆ, ಸಂಘಟನೆ ಮಾಡಲಿಕ್ಕೆ ನಾವು ಪ್ರೇರೇಪಿಸುತ್ತಿದ್ದೇವೆ, ಕಾರಣ, ಪೊಲೀಸ್ ಇಲಾಖೆ ಇವತ್ತು ಭಯೋತ್ಪಾದಕರನ್ನು ನಿಗ್ರಹ ಮಾಡಲಿಕ್ಕೆ ಅಸಮರ್ಥವಾಗಿದೆ ಎಂದು ಒಪ್ಪಿಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳುತ್ತಾರೆ. (ಗೊಂದಲ) ನೀವು ಉತ್ತರ ಕೊಡುವವರಲ್ಲ. ಮಂತ್ರಿಗಳು ಉತ್ತರ ಹೇಳುತ್ತಾರೆ. ಕುಳಿತುಕೊಳ್ಳಿ. ಮಂತ್ರಿಗಳಿದ್ದಾರೆ. ಅವರೇನು ಹೇಳಿದ್ದಾರೆ ಅದಕ್ಕೆ ಅವರು ಉತ್ತರ ಕೊಡುತ್ತಾರೆ. ದಯವಿಟ್ಟು, ನೀವು ಕುಳಿತುಕೊಳ್ಳಿ. ಸಿದ್ದು ಸವದಿಯವರೆ, ನೀವು ದಯಮಾಡಿ ಕುಳಿತುಕೊಳ್ಳಿ. ಸೋಮಶೇಖರ ರೆಡ್ಡಿಯವರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಸಿ. ಪಾಟೀಲ್ :- ಪೊಲೀಸ್ ಇಲಾಖೆಯವರು ಒಂದು ದಿವಸ ಕೆಲಸ ಮಾಡದಿದ್ದರೆ ಇವತ್ತು ಈ ರಾಜ್ಯದಲ್ಲಿ ಯಾವ ಕೆಲಸಗಳೂ ನಡೆಯುವುದಕ್ಕೆ ಸಾಧ್ಯವಿಲ್ಲ. ಪೊಲೀಸ್ ಇಲಾಖೆಯಿಂದ ಭಯೋತ್ಪಾದಕರನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಆದ್ದರಿಂದ, ಯುವಕರನ್ನು ನಾವು ಪ್ರೇರೇಪಿಸುತ್ತೇವೆಂದು ಏನು ಹೇಳಿದ್ದಾರೆ, ಇದರಿಂದ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. (ಗೊಂದಲ) ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂಬುದನ್ನು ಇದರಿಂದ ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ :- ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಯುವಕರನ್ನು ನಾವು ಜಾಗೃತಿಗೊಳಿಸಬೇಕಾಗಿದೆ, ಭಯೋತ್ಪಾದನೆ ವಿರುದ್ಧವಾಗಿ ಅವರಿಗೆ ನಾವು ಮನವರಿಕೆ ಮಾಡಿಕೊಟ್ಟು ಈ ದೇಶಕ್ಕೋಸ್ಕರ ಈ ಭಯೋತ್ಪಾದನೆ ವಿರುದ್ಧ ಹೋರಾಟ ಮಾಡುವ ಸಾಮರ್ಥ್ಯವನ್ನು ಅವರು ಪಡೆದುಕೊಳ್ಳಲಿಕ್ಕೆ ನಾವು ಅವರನ್ನು ಸಂಘಟನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ಒಂದು ಮಾತು ಕೇಳುತ್ತೇನೆ. ಈಗಾಗಲೇ NCC, Scouts and Guides, NSS ಎಂದು ಇದೆ, ಸೇವಾ ದಳ ಎಂದು ಇದೆ. ನೀವೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇವುಗಳಿಗೆ ಹೆಚ್ಚಿನ ಸ್ಫೂರ್ತಿ ಕೊಡಲಿಕ್ಕೆ ನೀವು ಅದಕ್ಕೇಕೆ ಧನಸಹಾಯ ಮಾಡುವುದಿಲ್ಲ? ಇವತ್ತು ಶಾಲೆಯಲ್ಲಿಯೂ NCC ಇಲ್ಲ. ನಾವು, ನೀವೆಲ್ಲ ಓದುವಾಗ NCC was compulsory. ಈಗ ಏಕೆ compulsory ಮಾಡುವುದಿಲ್ಲ? NSS, Scouts and Guides ಅನ್ನೇಕೆ compulsory ಮಾಡುವುದಿಲ್ಲ? ನಾವೆಲ್ಲ ಉಳವಿ ಬಸಪ್ಪನ ಜಾತ್ರೆ... ಅಲ್ಲೇನಾದರೂ ಒಂದು strike ನಡೆದಾಗ ನಮ್ಮನ್ನೆಲ್ಲ ಕರೆದುಕೊಂಡು ಹೋಗಿ dress ತೊಡಿಸಿ ನಿಲ್ಲಿಸುತ್ತಿದ್ದರು. ಇದೆಲ್ಲ ನಿಮಗೆಲ್ಲ ನೆನಪು ಇರಬಹುದು. ಆದರೆ, ಇವತ್ತು ನೀವು ಅದನ್ನೆಲ್ಲ ಏಕೆ ಮಾಡುತ್ತಿಲ್ಲ? ಹೊಸದಾಗಿ ಒಂದು ಹೆಸರು ಕೊಟ್ಟು ಹೊಸ ಕಾರ್ಯಕ್ರಮ ಪ್ರಾರಂಭ ಮಾಡಿ ಅದರಿಂದ ಪ್ರಚಾರ ಪಡೆಯುವಂಥ ಪ್ರಚಾರ ಪ್ರಿಯರಾಗುವುದು ಸರಿಯಲ್ಲ. ನಾವು ಏನೇ ಮಾಡಿದರೂ ಕೂಡ ಶಿಕ್ಷಣದ ಮೂಲಕ ಮಕ್ಕಳನ್ನು ಜಾಗೃತಿಗೊಳಿಸಬೇಕಾಗುತ್ತದೆ. ಕೇವಲ ಅವರನ್ನು ಜಾಗೃತಿ ಮಾಡಬೇಕು, ಅವರಿಗೆ training ಕೊಡುತ್ತೇವೆ, ಭಯೋತ್ಪಾದನೆ ಎಂದರೇನು? ಎನ್ನುವುದನ್ನು ಹೇಳಿಕೊಡುವುದಷ್ಟಕ್ಕೇ ಸೀಮಿತವಲ್ಲ. ನೀತಿ ಪಾಠಗಳನ್ನು ಮುಖ್ಯವಾಗಿ ಹೇಳಬೇಕಾಗುತ್ತದೆ. ಶಾಲೆಯಲ್ಲಿ Moral Science ಎನ್ನುವುದು ಸತ್ತು ಹೋಗಿದೆ. ನಮ್ಮ ಶಿಕ್ಷಣದಲ್ಲಿ Moral Science ಎನ್ನುವ subject ಇಲ್ಲ. ನಾವು ವಾರಕ್ಕೊಮ್ಮೆ ಏನು ತಪ್ಪು ಮಾಡಿದ್ದೇವೆ, ಏನು ಪುಣ್ಯ ಕಾರ್ಯ ಮಾಡಿದ್ದೇವೆ ಎಂದು ಶನಿವಾರ ದಿವಸ ಒಂದು ಪ್ರಶ್ನೆ ಕೊಡುತ್ತಿದ್ದರು, ಅದಕ್ಕೆ ನಾವು ಸೋಮವಾರ ಬಂದು ಉತ್ತರ ಕೊಡಬೇಕಾಗಿತ್ತು. ಇವತ್ತೇನಾದರೂ ನೀತಿ ಪಾಠ ಇದೆಯೇ? ಶಾಲೆಯಲ್ಲಿ ನೀತಿ ಪಾಠ ಎಲ್ಲಿದೆ? ಈ ಬದಲಾವಣೆ ತರುವ ಬಗ್ಗೆ ನೀವು ವಿಚಾರ ಮಾಡಿ. ಕೇವಲ ಅವರ ಕೈಯಲ್ಲಿ ಒಂದು ಬಂದೂಕ ಕೊಟ್ಟು ನಮ್ಮಲ್ಲಿರುವ ಹೊಸ

terrorist ಅನ್ನು ಹುಟ್ಟಿಸುವ ಪದ್ಧತಿಯನ್ನು ತರಲಿಕ್ಕೆ ದಯವಿಟ್ಟು ಹೋಗಬೇಡಿ. ಇದಕ್ಕೆ ಶಕ್ತಿ ತುಂಬಲಿಕ್ಕೆ ತಾವು ಆದಷ್ಟು ಸರ್ಕಾರದ ವತಿಯಿಂದ ಸ್ಫೂರ್ತಿ ಕೊಡಿ. ಹಣ ನೀಡಿ, ಈ ಸಂಸ್ಥೆಗಳಿಗೆ ಹೊಸ ಚುರುಕು ಮುಟ್ಟಿಸಿ ಮತ್ತು Home Guards ಎಲ್ಲಿದೆ? Home Guards ನವರಿಗೆ 50 ರಿಂದ 80 ರೂ.ಗಳನ್ನು ದಿನಗೂಲಿಗಿಂತ ಕಡಿಮೆ ಸಂಬಳ ಕೊಡುತ್ತೀರಿ. Home Guards ಅನ್ನು ಹೆಚ್ಚಿನ ಸಂಖ್ಯೆಯಲ್ಲಿ register ಮಾಡಿಸಿ civilians ಅನ್ನು ಏಕೆ involve ಮಾಡಿಕೊಳ್ಳುತ್ತಿಲ್ಲ?

ಅಧ್ಯಕ್ಷರು :- ದಯವಿಟ್ಟು ನೀವು ಪರಸ್ಪರ ಮಾತನಾಡಿಕೊಳ್ಳಬೇಡಿ, ಚರ್ಚೆ ಮಾಡಬೇಡಿ. ಸದಸ್ಯರು ಪರಸ್ಪರ ನೀವು ನೀವೇ ಚರ್ಚೆ ಮಾಡಿಕೊಳ್ಳುವುದಲ್ಲ. ಏನಾದರೂ ಮಾತನಾಡುವುದಿದ್ದರು ನೇರವಾಗಿ ಅಧ್ಯಕ್ಷರಿಗೆ address ಮಾಡಿ ಮಾತನಾಡಿ.

ಶ್ರೀ ಸಿ.ಎಸ್. ನಾಡಗೌಡ (ಅಫ್ಜಾಜಿ) :- ತಾವು ಹೊಸ ಕಾರ್ಯ ಕ್ರಮಗಳನ್ನು ರೂಪಿಸುವ ಬದಲು ನಮ್ಮಲ್ಲಿ available ಏನಿದೆ ಅದಕ್ಕೆ ಹೆಚ್ಚು ಸ್ಫೂರ್ತಿ ಕೊಟ್ಟು ಶಕ್ತಿ ತುಂಬುವುದು ಮಾಡಬೇಕು. Home Guards ನಿಜವಾಗಿ ಸತ್ತುಹೋಗಿದೆ.

ಅಧ್ಯಕ್ಷರು :- ಜಯಚಂದ್ರರವರೆ, ಕಾನೂನು ಸುವ್ಯವಸ್ಥೆ ಬಗ್ಗೆ ಚರ್ಚೆಯನ್ನು ತಾವು conclude ಮಾಡುತ್ತೀರಾ? ಆದಷ್ಟು ಬೇಗ ಮಾತನಾಡಿ ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ :- ಸಂಗಮೇಶ್‌ರವರು... .

ಅಧ್ಯಕ್ಷರು :- ನೀವು ಮೊದಲು ಮಾತನಾಡಿ ಮುಗಿಸಿ. ಆಮೇಲೆ ಅವರಿಗೆ ಅವಕಾಶ ಕೊಡೋಣ. ಅದಕ್ಕಿಂತ ಮುಂಚೆ proceedings ನಲ್ಲಿ ಕೆಲವೊಂದು ಶಬ್ಧಗಳೇನು ದಾಖಲಾಗಿವೆ, ಅದರ ಬಗ್ಗೆ ನಾನೊಂದು ruling ಕೊಡುತ್ತೇನೆ.

ಈ ದಿನ ದಿನಾಂಕ: 20-01-2009ರ ಬೆಳಗ್ಗಿನ ನಡೆವಳಿಯನ್ನು ಪರಿಶೀಲಿಸಲಾಗಿ ಮಾನ್ಯ ಸದಸ್ಯರುಗಳು ಕೆಲವು ಅಸಂಸದೀಯ ಶಬ್ಧಗಳನ್ನು ಉಪಯೋಗಿಸಿದ್ದಾರೆ. ಅವುಗಳು ಅಸಂಸದೀಯ, ಸದಭಿರುಚಿಯಿಂದ ಕೂಡಿಲ್ಲದೆ ಇರುವುದರಿಂದ ಅವುಗಳನ್ನು **ಕಡತದಿಂದ ತೆಗೆದು ಹಾಕಲಾಗಿದೆ.**

xxx xxx xxx

xxx xxx xxx

ಶ್ರೀ ಹೆಚ್.ಡಿ. ರೇವಣ್ಣ :- ಈಗಾಗಲೇ ದೂರದರ್ಶನದಲ್ಲಿ ಇದು ಪ್ರಚಾರವಾಗಿದೆ. ದೂರದರ್ಶನಕ್ಕೆ ಏನಾದರೂ ತಾವು ಹೇಳುತ್ತೀರಾ?

ಅಧ್ಯಕ್ಷರು :- ಈಗ direct relay ಯೂ ಇರುತ್ತದೆ. ಆದರೆ, ನಾನು ಮಾಧ್ಯಮಕ್ಕೆ request ಮಾಡುವುದೇನೆಂದರೆ, ನಾಳೆ ಪತ್ರಿಕೆಯಲ್ಲಿ ಈ ಶಬ್ಧಗಳು ಬರಬಾರದು. ಜಯಚಂದ್ರರವರೆ, conclude ಮಾಡಿ. ಡಾ: ಹೆಚ್.ಸಿ. ಮಹದೇವಪ್ಪನವರೆ, ನೀವು ಯಾವ ವಿಷಯದ ಮೇಲೆ ಮಾತನಾಡಬೇಕು?

ಡಾ॥ ಹೆಚ್.ಸಿ. ಮಹದೇವಪ್ಪ :- ನಾನೊಂದು relevant point ಹೇಳಬೇಕು. ಈಗಾಗಲೇ ಸ್ವಾಮಿ ವಿವೇಕಾನಂದರ ಬಗ್ಗೆ ಸದನದಲ್ಲಿ ವ್ಯಾಪಕವಾಗಿ ಚರ್ಚೆ ನಡೆದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಟ್ಟಿದ್ದಾರೆ.

ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಒಂದು ದೇಶಕ್ಕೆ ಒಂದು ಜಾತಿಗೆ ಒಂದು ಧರ್ಮಕ್ಕೆ ಸೀಮಿತವಾಗಿರುವುದಲ್ಲ. ಅವರ ವ್ಯಕ್ತಿತ್ವ ಇಡೀ ಪ್ರಪಂಚದ ಆಗು- ಹೋಗುಗಳಿಗೆ ಸೀಮಿತವಾದದ್ದು. ಅವರು ಚಿಕಾಗೋದಲ್ಲಿ ಜನರನ್ನು ಉದ್ದೇಶಿಸಿ "ನನ್ನ ಪ್ರೀತಿಯ ಸಹೋದರ, ಸಹೋದರಿಯರೆ," ಎಂದು ಭಾಷಣ ಮಾಡಿದರು. ಅವರು ಯಾವ ಜಾತಿ, ಧರ್ಮವನ್ನು ಉದ್ದೇಶಿಸಿ ಮಾತನಾಡಲಿಲ್ಲ. ಅವರು ಏನು ಮಾತನಾಡಿದರು ಎಂದರೆ, "ನನ್ನ ಪ್ರೀತಿಯ ಸಹೋದರ, ಸಹೋದರಿಯರೆ," ಎಂದು ಹೇಳಿದರು. ಅವರ ನಿಲುವು ಏನಿತ್ತು? Unity in Diversity ವೈವಿದ್ಯತೆಯಲ್ಲಿ ಏಕತೆಯನ್ನು ಕಾಣುವುದು. Unity in Diversity ಸ್ವಾಮಿ ವಿವೇಕಾನಂದರ ನಿಲುವು ವೈವಿದ್ಯತೆ. ಭಾರತ ದೇಶದಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚಿನ ಜಾತಿಗಳನ್ನು ಗುರುತಿಸಿದ್ದಾರೆ. ಅನೇಕ ಧರ್ಮಗಳಿವೆ. ಇವರೆಲ್ಲರೂ ಸಹೋದರ ಸಹೋದರಿ ರೀತಿ ಬದುಕತಕ್ಕಂಥದ್ದು ಎಂದು ಹೇಳಿದರು. ಅವರಿಗೆ ಪಟ್ಟಾ ಶಿಷ್ಯರು ಇದ್ದರು. ಬರೋಡಾದ ಮಹಾರಾಜರು ಮತ್ತು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು. ಪಾಶ್ಚಿಮಾತ್ಯ ದೇಶಗಳಿಗೆ ಪ್ರವಾಸಕ್ಕೆ ಹೋಗುವಾಗ ಅವರಿಗೆ ನಿಧಿ ಸಂಗ್ರಹಿಸಬೇಕೆಂದು ಅವರ ಅನುಮತಿ ಕೇಳದೆ ಸಂಗ್ರಹಿಸುತ್ತಿದ್ದರು. ಆಗ ನಮ್ಮ ಮೈಸೂರು ಪ್ರದೇಶಕ್ಕೆ ತಾವು

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಬರಬೇಕು, ತಮಗೆ ನಾವು ಸನ್ಮಾನ ಮಾಡಬೇಕು, ತಮಗೆ ನಿಧಿ ಕೊಡಬೇಕೆಂದು ಹೇಳಿದಾಗ ಸ್ವಾಮಿ ವಿವೇಕಾನಂದರವರು ನನ್ನ ಅನುಮತಿಯಿಲ್ಲದೆ, ನಾನು ಬಯಸದೇ ನನ್ನ ಹೆಸರಿನಲ್ಲಿ ಏಕೆ ನಿಧಿ ಸಂಗ್ರಹ ಮಾಡಿದಿರಿ ಎಂದು ಸಿಡಿಮಿಡಿಗೊಂಡರು. ಅವರು ಈ ರೀತಿಯಾಗಿ ಕೋಪಗೊಂಡು ಸಭೆಗೆ ಬರುವುದಿಲ್ಲವೆಂದು ಮೊದಲು ನಿರಾಕರಣೆ ಮಾಡಿದರೂ ಅವರ ಉದ್ದೇಶ ಸದುದ್ದೇಶವಾಗಿದ್ದರಿಂದ ಮತ್ತು ಅವರು ಜನಪರವಾಗಿದ್ದರಿಂದ ಅವರ ಕರೆಗೆ ಓಗೊಟ್ಟು ಹೋಗತಕ್ಕಂಥ ಸಂದರ್ಭದಲ್ಲಿ, ಬಡ ಜನರ ಮನಸ್ಸಿಗೆ ನೋವು ಆಗುವ ಹಾಗೆ ಏಕೆ ಈ ರೀತಿ ಮಾಡುತ್ತೀರಿ? ನೀವು ಎಲ್ಲಾ ಹಬ್ಬ ಹರಿದಿನಗಳನ್ನು ನಿಲ್ಲಿಸಿ, ಹರಿಜನರ ಬೀದಿಗೆ ಹೋಗಿ ಅವರ ಉದ್ಧಾರ ಮಾಡಿ ಎಂದು ಸ್ವಾಮಿ ವಿವೇಕಾನಂದರವರು ಹೇಳಿದರು. ಅವರ ಉದ್ದೇಶವನ್ನು ಅರ್ಥ ಮಾಡಿಕೊಳ್ಳದೆ ನಾವು ಇವತ್ತು ಚರ್ಚೆ ಮಾಡುತ್ತೇವೆ. ಇವತ್ತು ಜಗತ್ತು ಎರಡು ಬೃಹತ್ ಸಮಸ್ಯೆಗಳನ್ನು ಎದುರಿಸುತ್ತಿದೆ. ಒಂದು ಆರ್ಥಿಕ ಸಂಕಷ್ಟ, ಮತ್ತೊಂದು ಭಯೋತ್ಪಾದನೆ. ಭಯೋತ್ಪಾದನೆಯನ್ನು ಒಂದು ಧರ್ಮಕ್ಕೆ ಒಂದು ಜಾತಿಗೆ ಸೀಮಿತಗೊಳಿಸುವುದಕ್ಕೆ ಆಗುವುದಿಲ್ಲ. ಹಿಟ್ಲರ್ ಏನು ಮಾಡಿದ? ಮುಸಲೋನಿ ಏನು ಮಾಡಿದ? ಸ್ಟ್ಯಾಲಿನ್ ಏನು ಮಾಡಿದ? ಪ್ರಪಂಚದ ಬೇರೆ ಬೇರೆ ಅನೇಕ ದೇಶಗಳು ಈ ಒಂದು ಭಯೋತ್ಪಾದನೆ Fascism and Dictatorial Attitude ನಿಂದ ತಮ್ಮ ಕಪಿಮುಷ್ಟಿಯಲ್ಲಿ ಆಡಳಿತವನ್ನು ಮತ್ತು ಹಣಕಾಸಿನ ತೀರ್ಮಾನವನ್ನು ಮಾಡತಕ್ಕಂಥ ಪ್ರಯತ್ನವನ್ನು ಮಾಡಿದರು. ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಡಾರ್ವಿನ್‌ರವರು ಒಂದು ಮಾತು ಹೇಳಿದ್ದಾರೆ: "survive for existence, struggle for existence and survival of the fittest". ಇವತ್ತು ಪ್ರಪಂಚದಲ್ಲಿ ರಾಜ್ಯ ಅಧಿಕಾರದಲ್ಲಿ ಇದೇ ನಡೆಯುತ್ತಿರುವುದು. ಇದಕ್ಕೆ ಕೊನೆಹಾಡಿ. ಏಕೆ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಬಿಜೆಪಿ ಯವರು ಮಾಡಿದ್ದಾರೆ, ಸರ್ಕಾರ ಮಾಡಿದರೆ The tentacles of BJP are becoming overactive and they are trying to over-power everybody. ಇವತ್ತು ಸ್ವಾಮಿ ವಿವೇಕಾನಂದರವರು ತಮ್ಮ ನಿಲುವಿಗೆ ಎಟುಕದಂಥ ವ್ಯಕ್ತಿತ್ವ, ಇಡೀ ಜಗತ್ತಿನ ಮಾನವೀಯತೆಯನ್ನು ಎಲ್ಲಾ ಧರ್ಮವನ್ನು ಒಂದೇ ದೃಷ್ಟಿ ಕೋನದಲ್ಲಿ ನೋಡಿ ಸರ್ವತೋಮುಖ ಅಭಿವೃದ್ಧಿಯಾಗುವ ಉದ್ದೇಶವಾಗಿರುವುದರಿಂದ ಆ ದಿಟ್ಟಿನಲ್ಲಿ ಇಡೀ ಸದನ ಅದರ ಬಗ್ಗೆ ಗಮನಹರಿಸಬೇಕು.

ಅದು ಬಿಟ್ಟು ಯಾವುದೋ ಒಂದು ಪಕ್ಷಕ್ಕೆ, ಒಂದು ಜಾತಿಗೆ, ಒಂದು ಧರ್ಮಕ್ಕೆ ಸೀಮಿತಗೊಳಿಸಬಾರದು ಎಂದು ತಮ್ಮ ಮೂಲಕ ನಾನು ಸದನವನ್ನು ಒತ್ತಾಯಿಸುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ :- ಮಾನ್ಯ ಸದಸ್ಯರಾದ ಶ್ರೀ ಬಿ.ಕೆ. ಸಂಗಮೇಶ್ವರ ಅವರಿಗೆ ರಕ್ಷಣೆ ಒದಗಿಸುವ ಬಗ್ಗೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ನಿಮ್ಮ ಕಾನೂನು ಸುವ್ಯವಸ್ಥೆಯ ಬಗ್ಗೆ ನೀಡಿರುವ ನಿಲುವಳಿ ಸೂಚನೆಯನ್ನು ನಿಯಮ 69ಗೆ convert ಮಾಡಿ ಅವಕಾಶ ಕೊಟ್ಟಿದ್ದೇನೆ. ಅಧ್ಯಕ್ಷರು ಮಾತನಾಡುವಾಗ ದಯವಿಟ್ಟು ಯಾರು ಮಾತನಾಡಬೇಡಿ. ಸಂಗಮೇಶ್ವರವರದು ಒಂದು ಸಮಸ್ಯೆಯಿದೆ ಅವರು ಮಾತನಾಡಲಿ. ನಾನೇನು ಹೇಳುತ್ತೇನೆಂದರೆ, ನೀವು conclude ಮಾಡಿ. ಈಗಾಗಲೇ ಇವತ್ತು ಅಜೆಂಡಾದಲ್ಲಿ ರೂಲ್ 69 ನಲ್ಲಿ ಎರಡು ವಿಷಯಗಳನ್ನು ಪಟ್ಟಿ ಮಾಡಿದೆ. ಒಂದು ಗಣಿಗಾರಿಕೆಯ ಬಗ್ಗೆ ಮತ್ತೊಂದು ಮಾನ್ಯ ರೇವಣ್ಣನವರು ಕಳುಹಿಸಿರುವುದು ಎರಡು ಅಜೆಂಡಾದಲ್ಲಿ ಇದೆ. ಇದರ ಬಗ್ಗೆಯೂ ಚರ್ಚಿಸಬೇಕಾಗಿದೆ. ಇದಾದ ನಂತರ ಗಮನ ಸೆಳೆಯುವ ಸೂಚನೆಗಳಿವೆ ಇವುಗಳ ಬಗ್ಗೆನೂ ಚರ್ಚಿಸಬೇಕಾಗಿದೆ. ಇದರ ಜೊತೆಗೆ ಬಿಲ್‌ಗಳು ಇವೆ. ಇವೆಲ್ಲವೆನ್ನು ನಾವು ತೆಗೆದುಕೊಂಡು ಚರ್ಚೆ ಮಾಡಬೇಕಾಗುತ್ತದೆ. ಜೊತೆಗೆ ನಿಯಮದಲ್ಲಿ ಎಲ್ಲಾ ವಿಷಯದ ಬಗ್ಗೆ ಎಲ್ಲಾ ಮಾನ್ಯ ಶಾಸಕರು ಮಾತನಾಡಬೇಕೆಂದಿಲ್ಲ. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಈಗ ರೂಲ್ 69 ಗೆ convert ಮಾಡಿದ್ದೇನೆ. ಈ ವಿಷಯದ ಬಗ್ಗೆ ನಿಮ್ಮ ಪಕ್ಷದ ಪರವಾಗಿ ಯಾರ್‍ಯಾರು ಮಾತನಾಡುತ್ತಾರೆ 3-4 ಜನರ ಹೆಸರು ಕೊಡಿ. ಜೆಡಿಎಸ್ ನಿಂದ ಯಾರು ಮಾತನಾಡುತ್ತಾರೆ ಅವರ ಹೆಸರು ಕೊಡಲಿ. ಭಾರತೀಯ ಜನತಾ ಪಾರ್ಟಿಯಿಂದ ಯಾರ್‍ಯಾರು ಮಾತನಾಡುತ್ತಾರೆ ಅವರ ಹೆಸರುಗಳನ್ನು ಕೊಡಲಿ. ಮೂರು ವಿಷಯಗಳು 69 ನಲ್ಲಿ ಇವೆ. ಹೀಗಾಗಿ ಮೂರು ನಾಲ್ಕು ಜನರು ಯಾವ ವಿಷಯದಲ್ಲಿ ಯಾರ್‍ಯಾರು ಮಾತನಾಡುತ್ತಾರೆಂದು ಪಾರ್ಟಿವೈಸ್ ಹೆಸರುಗಳನ್ನು ಕೊಟ್ಟರೆ ನಾನು ಅವರನ್ನು ಕರೆಯುತ್ತೇನೆ. ಪ್ರತಿಯೊಬ್ಬರು ಕೈ ಎತ್ತಿ ನಿಲ್ಲುವುದು ಬೇಕಾಗಿಲ್ಲ. ಎಲ್ಲರಿಗೂ ಅವಕಾಶ ಕೊಡಲಿಕ್ಕೆ ಸಾಧ್ಯವೇ ಇಲ್ಲ. ಎಲ್ಲರಿಗೂ ಅವಕಾಶ ಕೊಟ್ಟರೆ ಲಾ ಅಂಡ್ ಆರ್ಡರ್ ಬಗ್ಗೆ ಮಾತ್ರ ಚರ್ಚೆ ಮಾಡಿದರೆ ಇಡೀ ದಿವಸ ಇದೇ ಒಂದು ವಿಷಯ ಚರ್ಚಿಸಿದ ಹಾಗೆ ಆಗುತ್ತದೆ. ಹೀಗಾಗಿ 69 ನಲ್ಲಿ ಮೂರು ವಿಷಯಗಳು ಇವೆ. ನಿಮ್ಮ